www.divinegen.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ – 8 ಸಂಚಿಕೆ – 11 ನವಂಬರ್ 2012
Volume : VIII Issue : XI November 2012

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Devine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ಕೃಪೆಯ ಜೀವಿತ – ವಯಸ್ಕರ ಸ್ವರ
3. ನೀತಿ ಪಾಠ
4. ಆರೋಗ್ಯವುಳ್ಳ ಮನಸ್ಸು
5. ಪ್ರಶ್ನೋತ್ತರಗಳ ಸ್ವರ
6. ಅನಾಥರ ಸ್ವರ
7. ಬೆತೆಲ್
8. ಆರೋಗ್ಯ ಸ್ವರ
9. ತಿಳುವಳಿಕೆಯ ಸ್ವರ
10. ಸ್ಥಳೀಯ ಮತ್ತು ವಿದೇಶ ಸುದ್ದಿ
11. ಮಹಿಳೆಯರ ಸ್ವರ– ರೂತಳು
12. ಪ್ರಾರ್ಥನಾ ಮನವಿಗಳು
13. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುವಿನ ನಾಮದಲ್ಲಿ ಪ್ರಿಯ ವಾಚಕರಿಗೆ ನನ್ನ ಆತ್ಮೀಯ ವಂದನೆಗಳು ಹೇಗೆ ದಿನಗಳು ಓಡುತ್ತಾ ಇವೆ ಎಂದು ಗೊತ್ತಾಗಲ್ಲ ಈ ವರ್ಷದ 10 ತಿಂಗಳುಗಳನ್ನು ಕಳೆದು 11ನೇ ತಿಂಗಳಿಗೆ ಕಾಲಿಟ್ಟಿದ್ದೇವೆ. ಯೋಬನು ಯೋಬ. 7:1 ರಲ್ಲಿ ಭೂಲೋಕದಲ್ಲಿ ಮನುಷ್ಯನಿಗೆ ದುಡಿಯುವ ವಾಯಿದೆಯುಂಟಲ್ಲವೇ ಅವನ ದಿನಗಳು ಕೂಲಿಯವನ ದಿನಗಳಂತೆ ಕಳೆಯುತ್ತವೆ.

ಯೋಬ. 7:6 ನನ್ನ ದಿವಸಗಳು ಮಗ್ಗದ ಲಾಳಿಗಿಂತ ವೇಗವಾಗಿ ನಿರೀಕ್ಷೆ ಇಲ್ಲದೆ ಕಳೆದು ಹೋಗುತ್ತವೆ. ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ ಕಳೆದ 10 ತಿಂಗಳಲ್ಲಿ ಎಷ್ಟು ಜನರಿಗೆ ಸುವಾರ್ತೆ ಸಾರಿದ್ದೇವೆ, ಎಷ್ಟು ಜನರನ್ನು ಕರ್ತನ ಕಡೆಗೆ ನಡೆಸಿದ್ದೇವೆ ಹಾಗೂ ನಮ್ಮ ಕ್ರಿಸ್ತೀಯ ಜೀವಿತವನ್ನು ಯಾವ ರೀತಿಯಾಗಿ ಜೀವಿಸಿದ್ದೇವೆ ನಮ್ಮಿಂದಾಗಿ ದೇವರ ರಾಜ್ಯಕ್ಕೆ ಏನಾದರೂ ಪ್ರಯೋಜನವಾಗಿದೆಯಾ ಇವೆಲ್ಲವೂ ನಮ್ಮ ಮುಂದಿರುವ ಪ್ರಶ್ನೆಗಳು. ದೇವರ ವಾಕ್ಯದಲ್ಲಿರುವ ಕೊನೆಯ ದಿನಗಳ ಗುರುತುಗಳು ನೆರವೇರುವುದನ್ನು ನಮ್ಮ ಸುತ್ತ ಮುತ್ತಲು ನೋಡಲಾಗಿ ದೇವಜನರು ಒಂದು ಭಾಗದಲ್ಲಿ ಯೇಸುವಿನ ಬರೋಣಕ್ಕೆ ಸಿದ್ಧರಾಗಬೇಕು. 2ನೇ ಭಾಗದಲ್ಲಿ ಜನರನ್ನು ಕ್ರಿಸ್ತನ ಬರೋಣಕ್ಕೆ ಸಿದ್ಧಪಡಿಸಬೇಕು.

ಯೆಹೆ. 38:7 **'ಸಿದ್ಧವಾಗಿರು ನಿನ್ನಲ್ಲಿ ಕೂಡಿಬಂದಿರುವ ಎಲ್ಲಾ ತಂಡಗಳೊಡನೆ ನಿನ್ನನ್ನು ಸಿದ್ಧಮಾಡಿಕೋ; ನೀನು ಅವುಗಳಿಗೆ ಪಾಲಕನಾಗಿರು.'** ಒಂದು ದೊಡ್ಡ ಜವಾಬ್ದಾರಿಯನ್ನು ಕರ್ತನಾದ ಯೇಸುಕ್ರಿಸ್ತನು ನಮಗೆ ಬಿಟ್ಟು ಹೋಗಿದ್ದಾನೆ. ನಾವು ನಮ್ಮ ಜವಾಬ್ದಾರಿಯನ್ನು ಯಾವ ರೀತಿಯಲ್ಲಿ ಮಾಡುತ್ತಿದ್ದೇವೆ ಲೋಕದಲ್ಲಿ ಅನೇಕ ಜನರು ಪಾಪದಲ್ಲಿ ಸತ್ತು ನರಕಕ್ಕೆ ಸೇರಿ ನಾಶವಾಗುತ್ತಿರುವಂತ ವೇಳೆಯಲ್ಲಿ ಕರ್ತನ ಕಣ್ಣುಗಳು ಕಣ್ಣೀರಿನೊಂದಿಗೆ ನಮ್ಮನ್ನು ನೋಡುತ್ತವೆ. ಅಂದು ಎಸ್ತೇರಳು ಎಸ್ತೇ. 8:7 ರಲ್ಲಿ ನನ್ನ ಕುಲನಾಶನವನ್ನು ನೋಡುವುದು ಹೇಗೆ ಸಹಿಸಲಿ ಎಂದು ವೈರಾಗ್ಯದಿಂದ ಹೇಳಿದ ಮಾತುಗಳು ನಮ್ಮ ಹೃದಯದಲ್ಲಿ ಹತ್ತಿ ಉರಿಯಲಿ ನಾಶವಾಗುತ್ತಿರುವಂತಹ ಆತ್ಮಗಳ ಬಳಿಗೆ ಹೋಗಿ ರಕ್ಷಕನ ಬಗ್ಗೆ, ರಕ್ಷಣೆಯ ಬಗ್ಗೆ, ಪರಲೋಕದ ಭಾಗ್ಯದ ಬಗ್ಗೆ, ನಿತ್ಯಜೀವದ ಬಗ್ಗೆ, ಮಾತನಾಡಿ ಅದಷ್ಟು ಜನರನ್ನು ರಕ್ಷಿಸೋಣ ದೇವರು ನಿಮ್ಮನ್ನು ಹುರಿದುಂಬಿಸಿ ಉಪಯೋಗಿಸಲಿ ಆಮೆನ್.

ಕರ್ತನು ಚೀಯೋನಿನಿಂದ ಆಶೀರ್ವದಿಸಲಿ, ಆಮೆನ್.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**4) ಪ್ರವಾದನೆಯ ಮಟ್ಟದಲ್ಲಿ :–** ಇದು ಪ್ರವಾದನೆ ಗ್ರಂಥವಾಗಿರುವುದರಿಂದ ಇದರಲ್ಲಿನ ಘಟನೆಗಳು ಈಗಿನವುಗಳಿಗಿಂತ ಭಿನ್ನವಾಗಿ ನೆರವೇರಬಹುದು. ಈ ಪ್ರವಾದನೆಗಳಿಗೂ ಮತ್ತಾಯ 13ನೇ ಅಧ್ಯಾಯದಲ್ಲಿನ ಸಾಮ್ಯಗಳಿಗೂ ಬಹಳಷ್ಟು ಹೋಲಿಕೆಗಳಿವೆ.

ಎಫೆಸ ಪಟ್ಟಣ (westers turkey) ಏಷ್ಯಾ ಸೀಮೆಯ ಪ್ರಧಾನ ಪಟ್ಟಣ ಒಬ್ಬ ರೋಮನ್ ಬರಹಗಾರನು ಹೇಳಿರುವುದು. Luman Asia ಏಷ್ಯದ ಬೆಳಕು (the light of Asia) ಎಂದು.

**ಪ್ರಧಾನ ಸವಿಶೇಷತೆ :** ಇಲ್ಲಿ ಡಯಾನ ದೇವಿಯ ದೇವಸ್ಥಾನವಿತ್ತು. ಅವತ್ತಿನ ಲೋಕದ 7 ಅದ್ಭುತಗಳಲ್ಲೊಂದಾಗಿತು. ಧಾರ್ಮಿಕ, ಆರ್ಥಿಕ, ರಾಜಕೀಯ ಮಟ್ಟದಲ್ಲಿ ಪ್ರಸಿದ್ಧವಾಗಿತ್ತು. ಕೆಯ್ಸರ್ ಎಂಬ ನದಿಯ ದಡದಲ್ಲಿ ಈ ಪಟ್ಟಣವು ಕಟ್ಟಲ್ಪಟ್ಟಿತು. ಮಾಟರ್ಬಲ್‌ನಿಂದ ಮಾಡಿದ ಕಟ್ಟಡಗಳು ಹಾಗೂ ಸ್ನಾನದ ಕೋಣೆಗಳು ಇಲ್ಲಿದ್ದವು. 25 ಸಾವಿರ ಜನರು ಕುಳಿತುಕೊಳ್ಳುವ ದೊಡ್ಡ ಕಟ್ಟಡವು ಇಲ್ಲಿ ಇತ್ತು. ಎಫೆಸ ಪಟ್ಟಣಕ್ಕಿಂತ 4 ಪಟ್ಟು ವಿಸ್ತೀರ್ಣದಲ್ಲಿ ದೊಡ್ಡದು. ಡಯಾನದೇವಿಯ ದೇವಸ್ಥಾನದ ನಿಮಿತ್ತ ಪಟ್ಟಣವು ಅಂಧಕಾರದಿಂದ ತುಂಬಿತು.

ಈ ಪಟ್ಟಣದ ಈಗಿನ ಸ್ಥಿತಿ :– ಪಶ್ಚಿಮ ಇದು, ಈಗ ಇದು ಚರಿತ್ರೆಯಿಂದ ನೀಗಿಸಲ್ಪಟ್ಟು ಸಾಮಾನ್ಯ ಬೀಡು ಆಗಿದೆ. ಪ್ರಕ. 2:5 ರಂತೆ ದೀಪ ಸ್ತಂಭ ತೆಗೆಯಲ್ಪಟ್ಟಿತ್ತು ಅಥವಾ ಕೆಟ್ಟು ಹೋಯಿತು. ಈಗ ಇಲ್ಲಿ ಒಬ್ಬ ಕ್ರೈಸ್ತ ವಿಶ್ವಾಸಿಯೂ ಇಲ್ಲದ ಸ್ಥಳವಾಗಿದೆ.

**ಈ ಪಟ್ಟಣದಲ್ಲಿ ಸಭೆಯ ಸ್ಥಾಪನೆ :** ಅ.ಕೃ. 19:1–20, 20:17–38 ಪೌಲನ ಎರಡನೇ ಮಿಶನರಿ ಪ್ರಯಾಣದಲ್ಲಿ ಈ ಪಟ್ಟಣವನ್ನು ಸಂದರ್ಶಿಸಿದನು. ನಂತರ ಅಕ್ವಿಲ ಪ್ರೀಸ್ಕ ಎಂಬ ದಂಪತಿಗಳನ್ನು ಇಲ್ಲಿ ಒಬ್ಬನು. ಅ.ಕೃ. 18:18–22 ಪೌಲನ ಮೂರನೇ ಮಿಶನರಿ ಪ್ರಯಾಣದಲ್ಲಿ ಮೂರು ವರ್ಷ ಈ ಪಟ್ಟಣದಲ್ಲಿ ಇದ್ದು ಸುವಾರ್ತೆ ಸಾರಿದನು.

**ಎಫೆಸದಲ್ಲಿ ಪೌಲನ 12 ವಿಧವಾದ ಸೇವೆ.**

1. ಅ.ಕೃ. 19:1–6 ರಲ್ಲಿ ಅಪೊಲ್ಲೋಸನ ಶಿಷ್ಯರನ್ನು ಸರಿಯಾದ ರಕ್ಷಣೆಗೆ ನಡೆಸಿದನು.
2. ನಂತರ ಎರಡು ವರುಷ ತುರನ್ನನ ತರ್ಕಶಾಲೆಯಲ್ಲಿ ಸತ್ಯವೇದ ಶಾಲೆ ಅ.ಕೃ. 19:7–10.
3. ಅ.ಕೃ. 19:11–20 ಬಿಡುಗಡೆಯ ಸೇವೆ
4. ಅ.ಕೃ. 20:19 ಕಣ್ಣೀರಿನ ಸೇವೆ
5. ಅ.ಕೃ. 20:19 ನಮ್ರತೆಯ ಸೇವೆ
6. ಅ.ಕೃ. 20:20 ಸಭೆಯಲ್ಲಿ ಸೇವೆ
7. ಅ.ಕೃ. 20:20 ಮನೆ ಮನೆಗಳಲ್ಲಿ ಸೇವೆ
8. ಅ.ಕೃ. 20:31 ಬುದ್ಧಿ ಹೇಳುವ ಸೇವೆ
9. ಅ.ಕೃ. 20:24 ಪ್ರೋತ್ಸಾಹದ ಸೇವೆ
10. ಅ.ಕೃ. 20:25–30 ಎಚ್ಚರಿಕೆಯ ಸೇವೆ
11. ಅ.ಕೃ. 20:34–35 ಮಾದರಿಯ ಸೇವೆ
12. ಅ.ಕೃ. 20:36 ಪ್ರಾರ್ಥನೆಯ ಸೇವೆ.

ಅಂಧಕಾರ ಶಕ್ತಿಯನ್ನು ನಾವು ಜಯಿಸದೆ ಸೇವೆಯಲ್ಲಿ ಬೆಳೆಯಲು ಸಾಧ್ಯವಿಲ್ಲ. ಬಲಿಷ್ಠನನ್ನು ಕಟ್ಟಿ ಹಾಕದ ಹೊರತು ಮನೆಯನ್ನು ಕೊಳ್ಳೆ ಹೊಡಯಲು ಸಾಧ್ಯವಿಲ್ಲ ಮತ್ತಾ. 12:29.

ತಿಮೊಥೆಯನು ಈ ಸಭೆಯ ಬಿಷೋಪನು ಆಗಿದ್ದನು. 1 ತಿಮೊ. 1:3 ನಂತರದಲ್ಲಿ ಯೋಹಾನನು.

**ಈ ಸಭೆಗೆ ಕ್ರಿಸ್ತನು ಕಾಣಿಸಿಕೊಂಡ ರೀತಿ :** 7 ನಕ್ಷತ್ರಗಳನ್ನು ಕೈಯಲ್ಲಿ ಹಿಡಿದುಕೊಂಡು 7ನಕ್ಷತ್ರಗಳು –ಸಭೆಯ ದೂತರು (ಸಭಾಪಾಲಕರು).

ಎಫೆಸ. 4:11–16 ಸಭೆಯ ಸಂಪೂರ್ಣ ಹತೋಟಿ ಕರ್ತನಿಗಿದೆ.

**ಸಭೆಯ ಅವಸ್ಥೆ :– ಅವರ ಒಳ್ಳೆತನಗಳು**

1) ನಿನ್ನ ಕೃತ್ಯ :– ಇಂಗ್ಲಿಷ್ ಗ್ರೀಕ್ 1 ಕೊರಿ. 15:48 ಕರ್ತನ ಸೇವೆಯಲ್ಲಿ ಪಡುವ ಪ್ರಯಾಸವು ನಿಷ್ಫಲವಾಗುವುದಿಲ್ಲ.

2) ಪ್ರಯಾಸ :– ಪ್ರತಿಯೊಂದು ಕೃತ್ಯಕ್ಕೂ ಪ್ರಯಾಸಗಳಿವೆ. ಸ್ವಯಂ ಸೇವಕನಾಗಿ ಕೆಲಸ ಮಾಡು.

3) ತಾಳ್ಮೆ :– ಕ್ರಿಸ್ತಿಯ ಜೀವಿತದಲ್ಲಿ ತಾಳ್ಮೆಯು ಅತಿ ಪ್ರಾಮುಖ್ಯವಾದ ಸಂಗತಿಯಾಗಿದೆ. ಇಬ್ರಿ. 10:35–36 ಕಷ್ಟಗಳನ್ನು ಸಹಿಸಲು, ಹೋರಾಟ ಜಯಿಸಲು, ನಂಬಿಕೆಯಲ್ಲಿ ಜೀವಿಸಲು, ಕ್ರಿಸ್ತನಂತೆ ಜೀವಿಸಲು ತಾಳ್ಮೆಯು ಅತೀ

ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲ ಕಾಯುವದು (ಫಿಲಿಪ್ಪಿ. 4:7).

ಪ್ರಾಮುಖ್ಯವಾಗಿದೆ ಯಾಕೋ. 1:1–4.

**4) ಸುಳ್ಳುಗಾರರನ್ನು ಕಂಡುಹಿಡಿಯುವುದು :** ಅ.ಕೃ. 20:25–30 ರಲ್ಲಿ ಪೌಲನು ಸುಳ್ಳು ಸೇವಕರ ಕುರಿತು ಮುನ್ನೆಚ್ಚರಿಕೆಯನ್ನು ಕೊಟ್ಟಿದ್ದನು.

ಹೀಗೆ ಸತ್ಯವೇದದಲ್ಲಿ ಹೊಸ ಒಡಂಬಡಿಕೆಯಲ್ಲಿ ಎಫೆ. 4:11ರ ಪ್ರಕಾರ ದೇವರ ರಾಜ್ಯದ ಕಟ್ಟೋಣದಲ್ಲಿ 5 ವಿಧವಾದ ಸೇವೆಗಳಿವೆಯೇ ಹಾಗೆಯೇ ಸೈತಾನನಿಂದ ಪ್ರೇರಿತವಾದ ಸುಳ್ಳು 5 ಸೇವೆಗಳು ಇವೆ. ಈ 5 ಸುಳ್ಳು ಸೇವೆಗಳು ದೇವರ ಸಭೆಯನ್ನು ಕೆಡಿಸುತ್ತವೆ. ಅನೇಕ ಕ್ರೈಸ್ತ ವಿಶ್ವಾಸಿಗಳು ನಂಬಿಕೆಯಲ್ಲಿ ಭಷ್ಟರಾಗುವಂತೆ ಕಾರ್ಯಾಚರಿಸುತ್ತವೆ.

1. ಸುಳ್ಳು ಅಪೋಸ್ತಲರು (ಪ್ರಕ. 2:2–4).
2. ಸುಳ್ಳು ಪ್ರವಾದಿಗಳು (2 ಪೇತ್ರ. 2:2).
3. ಸುಳ್ಳು ಸುವಾರ್ತಿಕರು (ಗಲಾ. 1:6–9, 2 ಕೊರಿ. 11:4).
4. ಸುಳ್ಳು ಕುರುಬರು (ರೋಮ. 15:20, 2 ಕೊರಿ. 10:12–18).

ಸುಳ್ಳು ಬೋಧಕರು (2 ಪೇತ್ರ. 2:1, ಅ.ಕೃ. 20:25–30).

*ಮುಂದುವರಿಯುವದು.......*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

---

# ಕೃಪೆಯ ಜೀವಿತ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

**"ಯೆಹೋವನು ಆನಂದಿಸುವುದು ತನ್ನ ಕೃಪೆಯನ್ನು ನಿರೀಕ್ಷಿಸುವ ಭಕ್ತರಲ್ಲೇ"** (ಕೀರ್ತ. 147:11). ದೇವ ಮಗುವೆ ನಮಗೆ ಈ ಲೋಕದಲ್ಲಿ ಹಣ, ಅಂತಸ್ತು, ಸ್ಥಾನಮಾನವೆಲ್ಲಾ ಹೇರಳವಾಗಿ ದೊರಕಿ ದೇವರ ಕೃಪೆವಿಲ್ಲದವರಾಗಿರುವುದಾದರೆ ಎಲ್ಲವೂ ವ್ಯರ್ಥವಾಗಿರುವುದು. ದೇವರು ಒಬ್ಬನಿಗೆ ಶ್ರೀಮಂತಿಕೆ ಕೊಟ್ಟರೆ ಅದನ್ನು ಅನುಭೋಗಿಸಲು ಕೃಪೆಯು ದೇವರಿಂದಲೇ ಬರುವುದಾಗಿದೆ. 'ಕೃಪೆ' ಎಂಬ ಪದವು ಸತ್ಯವೇದದಲ್ಲಿ ಸುಮಾರು 200 ಬಾರಿ ಬರುತ್ತದೆ. **'ಕೃಪೆ'** ಈ ಪದವು ಗ್ರೀಕ್ ಭಾಷೆಯಲ್ಲಿ ಕ್ಯಾರಿಸ್ ಎಂಬುವುದಾಗಿದೆ. ಇದರ ಅರ್ಥವೇನೆಂದರೆ ಯೋಗ್ಯತೆಯಿಲ್ಲದೆ ಇರುವವರಿಗೆ ಸಿಗುವ ದಯೆಯೇ ಕೃಪೆ ಆಗಿದೆ. "ಬಹಳ ದಯವು ಅವರೆಲ್ಲರ ಮೇಲೆ ಇತ್ತು" (ಅ.ಕೃ. 4:33). ಸುಲಭವಾದ ರೀತಿಯಲ್ಲಿ ಹೇಳಬೇಕಾದರೆ ರೂಪಾಯಿಗೂ ಯೋಗ್ಯತೆ ಇಲ್ಲದ ಒಬ್ಬ ಭಿಕ್ಷುಕನ ಹೆಸರಿನಲ್ಲಿ ಬ್ಯಾಂಕಿನಲ್ಲಿ ಅವನ ಹೆಸರಿನ ಖಾತೆ ತೆರೆದು 1 ಕೋಟಿ ರೂಪಾಯಿಗಳನ್ನು ಜಮಾಯಿಸಿ ಆತನ ಕೈಯಲ್ಲಿ ಎ.ಟಿ.ಎಮ್ ಕಾರ್ಡನ್ನು ಹಸ್ತಂತರಿಸಿ ನಿನಗೆ ಬೇಕಾದ ಹಾಗೆ ಉಪಯೋಗಿಸು ಎಂದ ಹಾಗೆಯೇ ಆಗಿದೆ. ಕ್ರಯ ಸಲ್ಲಿಸದೆ ಉಚಿತವಾಗಿ ಹೊಂದಿಕೊಳ್ಳುವುದೇ ಕೃಪೆ ಆಗಿದೆ. ಅಪೋಸ್ತಲನಾದ ಪೌಲನು ಬಹಳಷ್ಟು ಭಾದೆಗಳಲ್ಲಿ ಹಾದು ಹೋಗುತ್ತಿರುವಾಗಲೇ ಆತನ ಬಲಹೀನತೆಯಲ್ಲಿ ಕರ್ತನು ಸುರಿಸಿದ್ದು ಅಪಾರವಾದ ಕೃಪೆ. (2 ಕೊರಿ. 12:9).

ವಯಸ್ಕರ ಸ್ವರ

ಸತ್ಯವೇದದಲ್ಲಿ ಇಸ್ರಾಯೇಲ್ಯರ ಮೊದಲ ಅರಸನಾದ ಸೌಲನು ದೇವರಿಗೆ ಅವಿಧೇಯನಾದ್ದರಿಂದ ದೇವರ ಕೃಪೆಯು ಆತನನ್ನು ಬಿಟ್ಟು ಹೋಯಿತು (2 ಸಮು. 7:15). ಆದ್ದರಿಂದ ಕೃಪೆ ನಷ್ಟಪಟ್ಟ ಸೌಲನು ಆತ್ಮಹತ್ಯೆ ಮಾಡಿಕೊಂಡನು (1 ಸಮು. 31:4). ಅಪೋಸ್ತಲನಾದ ಪೌಲನು ಬರೆಯುತ್ತಾನೆ, **"ನಾನು ದೇವರ ಕೃಪೆಯನ್ನು ನಿರರ್ಥಕಮಾಡುವುದಿಲ್ಲ"** (ಗಲಾ. 2:21). ಎಫೆಸ ಪತ್ರಿಕೆಯ 2ನೇ ಅಧ್ಯಾಯದ ತಲೇಬರಹದಲ್ಲಿ ಈ ರೀತಿಯಲ್ಲಿ ಬರೆಯಲ್ಪಟ್ಟಿರುತ್ತದೆ. 'ದೇವರು ಪಾಪಾತ್ಮರನ್ನು ರಕ್ಷಿಸಿ ಕ್ರಿಸ್ತನ ಜೀವದಲ್ಲಿ ಪಾಲುಗಾರರನ್ನಾಗಿ ಮಾಡಿದ್ದಕ್ಕೆ ಆತನ ಕೃಪೆಯೇ ಕಾರಣ.

ನಾವು ರಕ್ಷಣೆ ಹೊಂದುವುದು ಆತನ ಕೃಪೆಯಿಂದಲೇ (ಎಫೆ. 2:8). ಯೇಸುವನ್ನು ನಂಬುವುದು ದೇವರ ಕೃಪೆಯ ಮೂಲಕವೇ (ಅಪೋ. 18:28). ನೀತಿ ಹಾಗೂ ನಿತ್ಯಜೀವವನ್ನುಂಟು ಮಾಡುವುದು ಆತನ ಕೃಪೆಯೇ ಆಗಿದೆ (ರೋಮ. 5:21). ನಾವು ಆರಿಸಲ್ಪಟ್ಟದ್ದು ದೇವರ ಕೃಪೆಯಿಂದಲೇ (ರೋಮ. 11:6). ನಾವು ದೇವರಿಂದ ಕರೆಯಲ್ಪಟ್ಟು, ಆರಿಸಲ್ಪಟ್ಟು ಕಡೆಯವರೆಗೆ ಉಳಿದಿರಬೇಕಾದರೆ ದೇವರ ಕೃಪೆಯೇ ಬೇಕು (ರೋಮ. 11:5). ಯೋಗ್ಯತೆಯಿಲ್ಲದೆ ನಮಗೆ ಅತಿಶಯವಾಗಿ ಸಿಗುವ ದೇವರ ಕೃಪೆಯನ್ನು ವ್ಯರ್ಥ ಮಾಡಬಾರದೆಂದು ಸತ್ಯವೇದ ಹೇಳುತ್ತದೆ (2 ಕೊರಿ. 6:1). ಅದರ ಬದಲಾಗಿ ನಾವು ಕೃಪೆಯಲ್ಲಿ ನಿಲ್ಲಬೇಕಾಗಿದೆ (2 ಪೇತ್ರ. 5:12). ಮಾತ್ರವಲ್ಲದೆ ದೇವರ ಕೃಪೆಯಲ್ಲಿ ಇನ್ನೂ ನಾವು ಅಭಿವೃದ್ಧಿಯಾಗಬೇಕಾಗಿದೆ.

ನಾನು ಅವರಲ್ಲಿ ವಾಸಿಸುತ್ತಾ ತಿರುಗಾಡುವೆನು, ನಾನು ಅವರಿಗೆ ದೇವರಾಗಿರುವೆನು,
ಅವರು ನನಗೆ ಪ್ರಜೆಯಾಗಿರುವರು (2 ಕೊರಿಂ. 6:16).

ಪ್ರಿಯ ದೇವ ಮಗುವೇ, ದೇವರ ಕೃಪೆಯನ್ನು ತಿರಸ್ಕರಿಸಬೇಡ. ಆತನು ನಮಗೆ ಕೃಪೆಯನ್ನು ತೋರಿಸಬೇಕಾಗಿ ಕಾದಿರುವನು. ಆದರೆ ನೀನು ಅದಕ್ಕಾಗಿ ಕಾದಿದ್ದು ಹೊಂದಬೇಕಾಗಿದೆ (ಯೆಶಾ. 30:18). ದೇವರು ಕುದುರೆಯಂತೆ ತನ್ನ ಶಕ್ತಿಯನ್ನು ಪ್ರದರ್ಶಿಸುವವನಾಗಲಿ, ಆಳಿನ ತೊಡೆಯ ಬಲವನ್ನಾಗಲಿ ಮೆಚ್ಚುವುದಿಲ್ಲ. ಆದರೆ ಆತನು ಮೆಚ್ಚುವುದು ತನ್ನ ಕೃಪೆಯನ್ನು ನಿರೀಕ್ಷಿಸುವ ಭಕ್ತರಲ್ಲೇ (ಕೀರ್ತ. 147:10–11). **'ಆತನು ಎಲ್ಲಾ ಕಾರ್ಯಗಳಲ್ಲಿ ನಮಗೆ ಕೃಪೆ ತೋರಿಸುವನು"** (ಕೀರ್ತ. 145:17).

ದೇವರು ಯಾರಿಗೆ ಕೃಪೆಯನ್ನು ತೋರಿಸುವನು ಎಂಬುವುದಾಗಿ ನಾವು ಧ್ಯಾನಿಸೋಣವೇ

1. ದೀನರಿಗೆ ಕೃಪೆ ತೋರಿಸುವನು (ಯಾಕೋ. 4:6). ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ. ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ (1 ಪೇತ್ರ. 5:5). ದೀನರು ಅಂದರೆ ತಗ್ಗಿಸಿಕೊಳ್ಳುವವರು, ಅಧೀನರಾಗುವುದು ಎಂದರ್ಥ. ಶ್ರೇಷ್ಟ ಅಪೋಸ್ತಲನಾದ ಪೌಲನು ತನ್ನನ್ನು ತಾನೇ ತಗ್ಗಿಸಿಕೊಂಡು ನಾನು ದೇವರ ಸಭೆಯನ್ನು ಹಿಂಸೆಪಡಿಸಿದ್ದರಿಂದ ಅಪೊಸ್ತಲ ನೆನೆಸಿಕೊಳ್ಳುವುದಕ್ಕೆ ಯೋಗ್ಯನಲ್ಲ ಆದರೆ ನಾನು ಎಂಥವನಾಗಿದ್ದೇನೋ ದೇವರ ಕೃಪೆಯಿಂದ ಅಂಥವನಾಗಿದ್ದೇನೆ" ( 1 ಕೊರಿ. 15:9–10). ಎಂದು ಬರೆಯುತ್ತಾನೆ. ಇಂದು ಸಭೆಯಲ್ಲಿ ಸ್ವಲ್ಪ ದೇವರ ವಾಕ್ಯ ಹೇಳಲು, ಅನ್ಯಭಾಷೆ ಬಂದು ಬಿಟ್ಟರೆ ಸಾಕು ಕೆಲವರಂತೂ ಭೂಮಿಯ ಮೇಲೆಯೇ ಇಲ್ಲದಂತೆ ಭಾವಿಸಿಕೊಂಡು ಸಭೆಯ ಪಾಲಕರನ್ನು, ಹಿರಿಯರನ್ನು ಕೂಡಾ ಗೌರವಿಸದೆ ಹೋಗುತ್ತಾರೆ. ಎಚ್ಚರಿಕೆ ನೀನು ದೇವರ ತ್ರಾಣವುಳ್ಳ ಹಸ್ತದ ಕೆಳಗೆ ತಗ್ಗಿಸಿಕೊಳ್ಳುವಿಯಾದರೆ ತಕ್ಕ ಕಾಲದಲ್ಲಿ ದೇವರು ನಿನ್ನನ್ನು ಮೇಲಕ್ಕೆತ್ತುವವನಾಗಿದ್ದಾನೆ (1 ಪೇತ್ರ. 5:6).

ಮುಂದುವರಿಯುವದು.....

**ಪಾ॥ ರೊನಾಲ್ಡ್ ಮಚಾದೋ**

ಬೇತೇಲ್ ಚರ್ಚ್ ಕಾಮಗೆರೆ.

# ನೀತಿ ಪಾಠ

**"ಹಮ್ಮಿನ ಕಣ್ಣುಳ್ಳವರನ್ನು ತಗ್ಗಿಸಿಬಿಡುವವನೂ ನೀನಲ್ಲವೋ? ನೀನೇ ನನ್ನ ದೀಪವನ್ನು ಹೊತ್ತಿಸುವವನಲ್ಲವೇ, ನನ್ನ ದೇವರಾದ ಯೆಹೋವನು ನನಗೆ ಬೆಳಕನ್ನುಕೊಟ್ಟು ಕತ್ತಲನ್ನು ಪರಿಹರಿಸುವವನು"** (ಕೀರ್ತ. 18:27–28). ಸಾಮಾನ್ಯವಾಗಿ ನಾವು ಜಿಂಕೆಯನ್ನು ನೋಡಿದ್ದೇವೆ. ಅದರಲ್ಲಿ ನಾವು ಕಾಣುವಂತ ಸುಂದರ ಸಂಗತಿ ಹೇಳಿದರೆ ಅದರ ಕೊಂಬು ಒಮ್ಮೆ ಜಿಂಕೆ ನೀರನ್ನು ಹರಸಿ ಕೆರೆಯ ಬಳಿ ಬಂದು ನೀರು ಕುಡಿಯುವಂತ ಸಮಯದಲ್ಲಿ ಅದರ ಪ್ರತಿಬಿಂಬವನ್ನು ನೀರಿನಲ್ಲಿ ನೋಡುತ್ತದೆ. ಅದಕ್ಕೆ ತಾನೆಷ್ಟು ಸುಂದರ ನನ್ನ ಕೊಂಬು ಎಷ್ಟೊಂದು ಅಂದವಾಗಿದೆ ಎಂದೆಣಿಸಿ ತನ್ನ ಕಾಲನ್ನು ನೋಡುತ್ತದೆ ಆಗ ಅದು ಛೇ ನಾನು ಎಷ್ಟೊಂದು ಸುಂದರವಾಗಿರುವಾಗ ನನ್ನ ಕಾಲು ಎಷ್ಟೊಂದು ಅಸಹ್ಯವಾಗಿದೆ ಎಂದೆಣಿಸಿ ಬೇಸರಪಟ್ಟುಕೊಂಡು ಹೋಗುವಂತ ಸಮಯದಲ್ಲಿ ಸಿಂಹವೊಂದು ಅದನ್ನು ಅಟ್ಟಿಸಿಕೊಂಡು ಬರುತ್ತದೆ. ಆಗ ಅದು ಶೀಘ್ರವಾಗಿ ಓಡಿ ತನ್ನನ್ನು ಸಿಂಹದ ಬಾಯಿಂದ ತಪ್ಪಿಸಿಕೊಳ್ಳುತ್ತದೆ. ಅದೇ ಸಮಯಕ್ಕೆ ಒಂದು ಮುಳ್ಳು ಪೋದೆಗೆ ತನ್ನ ಕೊಂಬು ಸಿಕ್ಕಿ ಹಾಕಿಕೊಂಡು ಅದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತದೆ ಆದರೆ ಸಾಧ್ಯವಾಗುವುದಿಲ್ಲ. ಆಗ ಸಿಂಹ ಬಂದು ಅದನ್ನು ತಿಂದು ಬಿಡುತ್ತದೆ. ಇದರಿಂದ ನಾವು ಕಲಿಯುವಂತ ವಿಷಯ ನಮ್ಮ ಜೀವಿತದಲ್ಲಿ ನನ್ನದು ಅನುವಂತದ್ದು ಯಾವುದು ಇಲ್ಲ. ಯಾವುದಕ್ಕೆ ಅದರೂ ನಾನು ಅಹಂಕಾರವಾಗಲಿ, ತಾತ್ಸರವಾಗಲಿ ಮಾಡಬಾರದು. ದೇವರು ಕೊಟ್ಟಂತ ಅಂಗಕ್ಕೆ ಅದರದೇ ಅದ ಸೌಂದರ್ಯವುಂಟು, ಕೆಲಸವುಂಟು (ಕಾರ್ಯ). ಅಷ್ಟು ಮಾತ್ರವಲ್ಲ ನಿಮ್ಮ ಸೌಂದರ್ಯದ ಕುರಿತಾಗಿ ಇತರರನ್ನು ತಾತ್ಸರಮಾಡದೇ ಇತರರ ಬಲಹೀನತೆಯಲ್ಲಿ ನಮ್ಮನ್ನು ಹೆಚ್ಚಿಸಿಕೊಳ್ಳದೆ ಯಾವಾಗಲೂ ಇರುವಂತ ಸಂಗತಿಗಳಲ್ಲಿ ದೇವರಿಗೆ ಕೃತಜ್ಞತಾ ಸ್ತುತಿಯನ್ನು ಮಾಡುತ್ತಿರಬೇಕು. **"ಸೌಂದರ್ಯವು ನೆಚ್ಚತಕ್ಕದ್ದಲ್ಲ, ಲಾವಣ್ಯವು ನೆಲೆಯಲ್ಲ; ಯೆಹೋವನಲ್ಲಿ ಭಯಭಕ್ತಿಯುಳ್ಳವಳೇ ಸ್ತೋತ್ರಪಾತ್ರಳು"**. ಯಾರಿಗೆ ಗೊತ್ತು ಜಿಂಕೆಯ ಕಾಲಿನಂತೆ ನಾವು ಸಿಂಹದ ಬಾಯಿ ಅಂದರೆ ಸೈತಾನನ ಕುತಂತ್ರದಿಂದ ತಪ್ಪಿಸಿಕೊಂಡು ಓಡಿ ಹೋಗಲುಬಹುದು. ಅಥವಾ ಅದರ ಕೊಂಬಿನ ಅಂದದ ಕುರಿತಾದ ಅಹಂಕಾರದಿಂದ ಪಾಪದಲ್ಲಿ ಸಿಕ್ಕಿಹಾಕಿಕೊಂಡು ಹೊರಕ್ಕೆ ಬರಲಾರದೇ ಇರಬಹುದು ತುಂಬಾ ಜಾಗರೂಕತೆಯಿಂದ ನಾವು ಈ ಲೋಕದಲ್ಲಿ ಜೀವಿಸುವವರಾಗಿರಬೇಕು. **"ಸೈತಾನನು ನಮ್ಮನ್ನು ವಂಚಿಸಿ ನಷ್ಟಪಡಿಸಬಾರದು; ಅವರ ಯೋಚನೆಗಳನ್ನು ನಾವು ಅರಿಯದವರಲ್ಲವಲ್ಲಾ"** (2 ಕೊರಿ. 2:11).

**– ಸಹೋ॥ ಪ್ರಸಾದ್ ಪ್ರಭು.**

ಆಗ ಯೆಹೋವನಲ್ಲಿ ಸಂತೋಷಿಸುವಿ; ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು (ಕೀರ್ತ. 37:4).

## ಉಪ್ಪು ತಪ್ಪಬರದು...

'ಉಪ್ಪಿಗಿಂತ ರುಚಿ ಬೇರೆ ಇಲ್ಲ' ಎಂಬ ಗಾದೆ ಮಾತನ್ನು ನೀವು ಕೇಳಿರಬಹುದು. ನಾವು ಸೇವಿಸುವ ಯಾವುದೇ ಆಹಾರದೊಂದಿಗೆ ಉಪ್ಪು ಇರಲೇಬೇಕು. ನಮ್ಮ ಊಟದ ರುಚಿಯನ್ನು ಹೆಚ್ಚಿಸುವ ಈ ಲವಣ ನಮ್ಮ ದೇಹದ ತೇವಾಂಶ, ಪೌಷ್ಟಿಕಾಂಶದ ಸಮತೋಲನ ಕಾಪಾಡುತ್ತದೆ.

ಉಪ್ಪಿಗೆ ವಿಶಿಷ್ಟವಾದ ಇತಿಹಾಸವಿದೆ. ಅದನ್ನು ಸ್ನೇಹ ಮತ್ತು ಅತಿಥಿ ಸತ್ಕಾರದ ಸಂಕೇತ ಎನಿಸಿಕೊಂಡಿದೆ. ಮಧ್ಯಕಾಲೀನ ಯುಗದಲ್ಲಿ ಉಪ್ಪನ್ನು ಸಂಬಳವಾಗಿ ನೀಡುತ್ತಿದ್ದ ದಾಖಲೆಗಳೂ ಇವೆ.

ಭಾರತದಲ್ಲಿ ಮಹಾತ್ಮ ಗಾಂಧೀಜಿ ಅವರ ನೇತೃತ್ವದಲ್ಲಿ ಒಂದು ಚಳವಳಿ ನಡೆದಿದ್ದು ನಿಮಗೆ ಗೊತ್ತಿದೆ. ಬ್ರಿಟಿಷರು ಉಪ್ಪಿನ ಮೇಲೆ ಹೇರಿದ್ದ ಕರವನ್ನು ವಿರೋಧಿಸಿ ದಂಡಿ ಸತ್ಯಾಗ್ರಹ ನಡೆದಿತ್ತು.

ಉಪ್ಪಿನಲ್ಲಿ ಶೇ. 50 ರಷ್ಟು ಸೋಡಿಯಂ ಮತ್ತು ಶೇ. 60ರಷ್ಟು ಕ್ಲೋರೈಡ್ ಇರುತ್ತದೆ. ಇವು ದೇಹದಲ್ಲಿ ರಕ್ತದೊತ್ತಡ, ಮೂಳೆಗಳ ಆರೋಗ್ಯವನ್ನು ನೋಡಿಕೊಳ್ಳುತ್ತವೆ.

**ಇದು ಗೊತ್ತಾ?**

* ಹಿಮಾಲಯದಲ್ಲಿ ನಸುಗೆಂಪು ಬಣ್ಣದ ಉಪ್ಪು ಬಳಕೆಯಾಗುತ್ತದೆ. ಐರನ್ ಡೈ ಆಕ್ಸೈಡ್‌ನಿಂದಾಗಿ ಉಪ್ಪು ಈ ಬಣ್ಣಕ್ಕೆ ತಿರುಗುತ್ತದೆ. ಇದನ್ನು ಅಡುಗೆ ಬಳಸಲಾಗುತ್ತದೆ.
* ನಿಮಿಗಿಷ್ಟವಾದ ಸ್ವಾದದ ಉಪ್ಪನ್ನು ಸಿದ್ಧಪಡಿಸಿಕೊಳ್ಳಬಹುದು. ಗೋಣಿ ಸೊಪ್ಪು, ದೊಡ್ಡಪತ್ರೆಗಳನ್ನು ಸೇರಿಸಿ ಉಪ್ಪಿನ ಸ್ವಾದವನ್ನು ಇನ್ನಷ್ಟು ಹೆಚ್ಚಿಸಬಹುದು.
* ಸಾಗರದ ಉಪ್ಪಿನಲ್ಲಿ ಹೆಚ್ಚಿನ ತೇವಾಂಶವಿರುತ್ತದೆ. ಫ್ರಾನ್ಸ್‌ನ ಪ್ಲೀ ಡೆಸೆಲ್‌ನ ಉಪ್ಪು ಹೆಚ್ಚು ಜನಪ್ರಿಯ.
* ಸಂಸ್ಕರಣಗೊಳ್ಳದ ಉಪ್ಪಿನಲ್ಲಿ ಸುಮಾರು 84 ಖನಿಜಗಳಿರುತ್ತವೆ.
* ಖನಿಜಗಳಿಂದಾಗಿ ಉಪ್ಪು ಬಣ್ಣವನ್ನು ಪಡೆದುಕೊಳ್ಳುತ್ತದೆ. ಹಾಗಾಗಿ ಕಪ್ಪು, ನಸುಗೆಂಪು, ಹಳದಿ ಮತ್ತು ನೀಲಿ ಬಣ್ಣವನ್ನು ಪಡೆದುಕೊಳ್ಳುತ್ತದೆ.

– ಸಂಗ್ರಹ.

---


**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ಹಾಗೂ ನಿಮ್ಮ ಮಕ್ಕಳ ಹುಟ್ಟಿದ ದಿನವನ್ನು ನಮ್ಮ ಅನಾಥಶ್ರಮದ ನಿವಾಸಿಗಳೊಂದಿಗೆ ಆಚರಿಸುವೀರಾ?**

**ಹಾಗಾದರೆ ನಿಮಗೆ ಸ್ವಾಗತ 15,000/–**

* ನಿಮ್ಮ ಹುಟ್ಟಿದ ದಿನ.
* ನಿಮ್ಮ ಮಕ್ಕಳ ಹುಟ್ಟಿದ ದಿನ.
* ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನ.
* ನಿಮ್ಮ ಮದುವೆ ದಿನ.

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.

* * * * *

**ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ**

* ಪ್ರಾರ್ಥನೆ * ಆರ್ಥಿಕ ಸಹಾಯ

| | |
|---|---|
| ತಿಂಗಳಿಗೊಮ್ಮೆ | ರೂ. 500/– |
| ಮೂರು ತಿಂಗಳಿಗೊಮ್ಮೆ | ರೂ. 2000/– |
| ಆರು ತಿಂಗಳಿಗೊಮ್ಮೆ | ರೂ. 6000/– |
| ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.


ಆತ್ಮದಲ್ಲಿ ಬಡವರಾಗಿರುವವರು ಧನ್ಯರು; ಪರಲೋಕರಾಜ್ಯವು ಅವರದು
(ಮತ್ತಾಯ 5:3).

# ಆರೋಗ್ಯವುಳ್ಳ ಮನಸ್ಸು

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು.

**ಮನುಷ್ಯರ ಕೋಪವೂ ನಿನ್ನ ಘನಕ್ಕೇ ಸಾಧಕವಾಗುವದು;** (ಕೀರ್ತ. 76:10).

ಕರ್ತನಲ್ಲಿ ಪ್ರಿಯರೇ, ಆದಿಕಾಂಡ-37ರಿಂದ 50 ಅಧ್ಯಾಯದವರೆಗೆ ಧ್ಯಾನಿಸುವಾಗ ಯೋಸೇಫನ ಚರಿತ್ರೆ ಕಾಣಬಹುದು.

ಇಸ್ರಾಯೇಲನು ತನ್ನ ಎಲ್ಲಾ ಮಕ್ಕಳಿಗಿಂತ ಯೋಸೇಫನನ್ನು ಹೆಚ್ಚಾಗಿ ಪ್ರೀತಿಸಿದ ನಿಮಿತ್ತವಾಗಿ ಅವನ ಅಣ್ಣಂದಿರು ಯೋಸೇಫನನ್ನು ಹಗೆ ಮಾಡಿ ಅವನೊಡನೆ ಸ್ನೇಹಭಾವದಿಂದ ಮಾತಾಡಲಾರದೆ ಹೋದರು. ಯೋಸೇಫನು ತಾನು ದೇವರಿಂದ ಹೊಂದಿದ ಕನಸನ್ನು ತನ್ನ ಅಣ್ಣಂದಿರಿಗೆ ತಿಳಿಸಿದಾಗ ಅವರು ಅವನನ್ನು ಇನ್ನೂ ಹೆಚ್ಚಾಗಿ ದ್ವೇಷಿಸಿ ಹೊಟ್ಟೆಕಿಚ್ಚುಪಟ್ಟು ಸಮಯ ಸಂದರ್ಭ ಬಳಸಿಕೊಂಡು ಅವನನ್ನು ಹಿಡಿದು ತಂದೆಕೊಟ್ಟ ನಿಲುವಂಗಿಯನ್ನು ತೆಗೆದು ಹಾಳಾದ ಬಾವಿಗೆ ಹಾಕಿದರು. ಅಲ್ಲಿಂದ ತೆಗೆದು ಇಸ್ಮಾಯೇಲ್ಯರಿಗೆ ಇಪ್ಪತ್ತು ರೂಪಾಯಿಗಳಿಗೆ ಮಾರಿದರು ಮತ್ತು ತಂದೆಯ ಬಳಿ ಇವನು ಸತ್ತು ಹೋದನು ಎಂದು ಹೇಳಿದರು.

ಮಾರಲ್ಪಟ್ಟ ದೇಶದಲ್ಲಿಯೂ ಯಾವುದೇ ತಪ್ಪನ್ನು ಮಾಡದ ಯೋಸೇಫನ ಮೇಲೆ ತಪ್ಪುಹೊರಿಸಿ ಸೆರೆಮನೆಗೆ ಹಾಕಿದರು. ಈ ಕಷ್ಟ, ನಿರಾಶೆ, ವೇದನೆ, ಏಕಾಂತತೆ, ಇವುಗಳ ಮಧ್ಯದಲ್ಲಿಯೂ ತನ್ನ ಸಹೋದರರನ್ನು, ಮನೆಯವರನ್ನು, ಊರಿನವರನ್ನು ನೆನೆಸಿ ಇವರೆಲ್ಲರೂ ನಾಶವಾಗಿದ್ದರೆ ಚೆನ್ನಾಗಿತ್ತು ಎಂದು ಅವರ ಕುರಿತಾಗಿ ಕಹಿತನ ಇಟ್ಟುಕೊಳ್ಳಲಿಲ್ಲ. ಯೋಸೇಫನಿಗೆ ಚೆನ್ನಾಗಿ ಗೊತ್ತಿತ್ತು ಈ ವೇದನೆ ಮಧ್ಯದಲ್ಲಿಯೂ ದೇವರಿಗೆ ಒಂದು ಉದ್ದೇಶವಿದೆ ಎಂದು ತಿಳಿದುಕೊಂಡಿದ್ದನು.

ಯೋಸೇಫನು ಮಾರಲ್ಪಟ್ಟ ದೇಶದಲ್ಲಿ ನಾಲ್ವತ್ತಮೂರು ವರ್ಷ ಸರ್ವಾಧಿಕಾರಿಯಾಗಿ ಆಡಳಿತ ನಡೆಸಬೇಕು ಎಂದು ಇದು ದೇವರ ಆಲೋಚನೆಯಾಗಿತ್ತು ಅದಕ್ಕಾಗಿಯೇ ಯೋಸೇಫನು ಹದಿಮೂರು ವರ್ಷಗಳ ಕಾಲ ವೇದನೆಯೆಂಬ ವಿಶ್ವವಿದ್ಯಾಲಯದಲ್ಲಿ ಕಲಿಯಬೇಕಾಗಿತ್ತು. ಯೋಸೇಫನು ತನ್ನವರ ಕುರಿತಾಗಿ ಕಹಿಯುಳ್ಳವನಾಗಿದ್ದರೆ ದೇವರಿಂದ ಯಾವ ಆಶೀರ್ವಾದ ಹೊಂದಿಕೊಳ್ಳಲು ಸಾಧ್ಯವಾಗಲಿಲ್ಲ. ಆತನು ತನ್ನ ಸಹೋದರಿಗಾಗಿ ಬಹಳವಾಗಿ ಅತ್ತನು ಮತ್ತು ಪ್ರೀತಿಯಿಂದ ಮಾತಾಡಿದನು. ಅವರಿಗೆ ಬೇಕಾದ ಎಲ್ಲವನ್ನು ಕೊಟ್ಟು ಪೋಷಿಸಿದನು.

ಕಹಿಯು ಒಬ್ಬ ಮನುಷ್ಯನನ್ನು ಜಜ್ಜಿ ಪುಡಿಮಾಡುವ ಭೀಕರವಾದ ಶತ್ರು ಮತ್ತು ಪಾಪವೂ ಆಗಿದೆ. ಕ್ಷಮಿಸದಿರುವಾಗ ಕಹಿಯು ನಮ್ಮ ಜೀವಿತದಲ್ಲಿ ಪ್ರವೇಶಿಸುತ್ತದೆ. ನಾವು ಅನುಭವಿಸಿದ ಗಾಯ, ನೋವು, ಅದು ಒಣಗದ ಹಾಗೆ ನಾವು ಕಾಪಾಡಿಇಟ್ಟುಕೊಂಡಿದ್ದೇವೆ. ಅದರ ಫಲವಾಗಿ ನಮ್ಮ ಹೃದಯವು ಕಠಿಣವಾಗುತ್ತದೆ. ದಿನ ಕಳೆದಂತೆ ಅದು ಹೆಚ್ಚು ಬಲ ಹೊಂದುತ್ತದೆ. ನಮ್ಮ ಮಾತಿನಲ್ಲಿ ವರ್ತನೆಯಲ್ಲಿ ಪ್ರೀತಿ ಮತ್ತು ಕನಿಕರ ಇಲ್ಲ. ಹೇಳುವ ತಮಾಷೆ ಸಹ ಇತರರನ್ನು ಚುಚ್ಚುವಂತದ್ದಾಗಿರುತ್ತದೆ.

ಜೀವಿತದ ಸಂಬಂಧವಿರುವ ವೀಕ್ಷಣೆಯು ಅಲ್ಲೋಕಲ್ಲೋಲವಾಗುತ್ತದೆ ಕೋಪವು ಜ್ವಲಿಸುತ್ತದೆ ಪ್ರತೀಕಾರ ಮಾಡಲಿರುವ ಬಯಕೆಯು ನಿಮ್ಮಲ್ಲಿ ಉಂಟಾಗುತ್ತದೆ ಅವನು ಹಾಳಾಗಿ ಹೋಗಬೇಕು ಎಂಬ ಬಯಕೆಯು ನಿಮ್ಮಲ್ಲಿರುತ್ತದೆ. ಸಾಧಾರಣವಾಗಿ ಮಾತನಾಡುವಾಗಲೂ ಸಹ ಇತರರ ಕುರಿತು ಚಾಡಿ ಮಾತುಗಳು, ದ್ವೇಷ ಮತ್ತು ಕೆಟ್ಟತನವಾಗಿ ಮಾರ್ಪಡುತ್ತದೆ.

ವಿಲಿಯಂ ಶೇಕ್ಸ್‌ಪಿಯರ್ ಹೇಳಿದರು **"ನಿನ್ನ ಶತ್ರುವಿಗಾಗಿ ನೀನು ಹೆಚ್ಚಿಸುವ ಬೆಂಕಿಯ ಜ್ವಾಲೆಯು ನಿನ್ನನ್ನೇ ದಹಿಸಿಬಿಡುವಷ್ಟು ಕಠಿಣವಾಗಬಾರದು"**. ದಾನಿಯೇಲ 3ನೇ ಅಧ್ಯಾಯ ನೋಡುವಾಗ ಬಾಬೆಲ್ ಸಂಸ್ಥಾನದಲ್ಲಿ ಅರಸನಾದ ನೆಬೂಕದ್ನೆಚ್ಚರನು ನಿಲ್ಲಿಸಿದ ಬಂಗಾರದ ಪ್ರತಿಮೆಗೆ ಅಡ್ಡಬೀಳದ ಶದ್ರಕ್, ಮೇಶಕ್, ಅಬೇದನೆಗೋ ಕುರಿತಾಗಿ ಕೇಳಿದಾಗ ಅರಸನ ಕೋಪವು ಜ್ವಲಿಸಿತು. **"ಬೆಂಕಿಯ ಬಲವನ್ನು ಏಳರಷ್ಟು ಹೆಚ್ಚಿಸಿರಿ. ಇವರ ಕೈ ಕಾಲುಗಳನ್ನು ಕಟ್ಟಿ ಆ ಬೆಂಕಿಯೊಳಗೆ ಹಾಕಿರಿ"**.

ಬೆಂಕಿಯ ಬಲವು ಕಠಿಣವಾಗಿದ್ದರಿಂದ ಇವರನ್ನು ಬೆಂಕಿಗೆ ಹಾಕಲು ಬಂದ ಬಲಿಷ್ಠರು ಕೆಲವೇ ನಿಮಿಷಗಳಲ್ಲಿ ಸುಟ್ಟು ಬೂದಿಯಾದರು. ಆದರೆ ಇವರು ಬೆಂಕಿಗೆ ಬಿದ್ದರೂ ದೇವರು ಅವರನ್ನು ಬಿಡಿಸಿದನು. ಕ್ಷಮಿಸಲು ಸಾಧ್ಯವಾಗದಿರುವಾಗ ನಿನಗೂ ಇದೇ ರೀತಿ ಸಂಭವಿಸುತ್ತದೆ. ಅವರಿಗೆ ನಾಶ ಸಂಭವಿಸಬೇಕು ಎಂಬ ನಿನ್ನ ಬಯಕೆಯಿಂದ ಬೆಂಕಿಯನ್ನು ಹೆಚ್ಚಿಸುವಾಗ ಕೊನೆಗೆ ನೀನೇ ಆ ಬೆಂಕಿಯಲ್ಲಿ ಬೀಳುತ್ತೀ.

ಒಬ್ಬ ಅತ್ತೆಯಾದವಳು ನನ್ನ ಮಗ ಸತ್ತರೂ ಪರವಾಗಿಲ್ಲ ಸೊಸೆ ಕಣ್ಣೀರಿಡುವುದನ್ನು ನೋಡಬೇಕು. ಒಬ್ಬ

ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು
(2 ಕೊರಿಂ. 5:17).

ಸೊಸೆಯಾದವಳು ನನ್ನ ಅತ್ತೆ ಬೇಗ ಸತ್ತರೆ ಚೆನ್ನಾಗಿತ್ತು ಈಕೆಯ ಶೂಶ್ರಷೆ, ಕರಕರೆ ತಪ್ಪಿತ್ತಲ್ಲ ಎಂದು ಯೋಚಿಸುತ್ತಾರೆ. ಇದು ಆರೋಗ್ಯವಾದ ಮನಸ್ಸಲ್ಲ, ಇವತ್ತು ಕ್ರೈಸ್ತ ಕುಟುಂಬಗಳನ್ನು ಕಾಣುವಾಗ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳದೆ ಜೀವಿಸುತ್ತಿದ್ದಾರೆ. ಕಾರಣ ಒಳಗೆ ಕಹಿ ಮನೆ ಮಾಡಿಕೊಂಡಿದೆ.

* ಸೌಲನು ದಾವೀದನನ್ನು ಕೊಲ್ಲಬೇಕೆಂದು ಕತ್ತಿ ಹಿಡಿದು ಬಿಡುವಿಲ್ಲದೆ ತಿರುಗಾಡಿದನು ಕೊನೆಗೆ ಅದೇ ಕತ್ತಿಯಲ್ಲಿ ತಾನು ಇರಿದುಕೊಂಡು ಸತ್ತನು.
* ಹಾಮಾನನು ಮೊರ್ದೆಕೈಗಾಗಿ ಎಲ್ಲರಿಗೂ ಕಾಣಬೇಕೆಂದು ಐವತ್ತು ಮೊಳ ಎತ್ತರದ ನೇಣುಗಂಬವನ್ನು ಸಿದ್ಧಮಾಡಿದನು. ಆದರೆ ಅದೇ ನೇಣುಗಂಬದಲ್ಲಿ ಹಾಮಾನನು ಸತ್ತನು.
* ದಾವೀದನು ನಾಶವಾಗಬೇಕೆಂದು ಅಬ್ಷಾಲೋಮನಿಗೆ ಆಲೋಚನೆ ಕೊಟ್ಟ ಅಹೀತೋಫೇಲನು ತಾನೇ ಉರ್ಲು ಹಾಕಿಕೊಂಡು ಸತ್ತನು.
* ತನ್ನ ತಂದೆಯಾದ ದಾವೀದನನ್ನು ಕೊಲ್ಲಬೇಕೆಂದು ಪಟ್ಟುಹಿಡಿದ ಅಬ್ಷಾಲೋಮನು ಭೂಮಿಗೂ ಆಕಾಶಕ್ಕೂ ನಡುವೆ ನೇತು ಹಾಕಲ್ಪಟ್ಟು ಸತ್ತುಹೋದನು.
* ದಾನಿಯೇಲನನ್ನು ಸಿಂಹದ ಗವಿಗೆ ಹಾಕಿಸಿ ಸಂತೋಷಪಡುತ್ತಿದ್ದ ದೂರುಗಾರರು ತಾವೇ ಸಿಂಹದ ಗವಿಗೆ ಹಾಕಲ್ಪಟ್ಟು ಸತ್ತು ಹೋದರು.

ಪ್ರಿಯನೇ ನೀನು ಏನನ್ನು ಬಿತ್ತುತ್ತೀಯೋ ಅದರಂತೆ ನಿನಗಾಗುವುದು. ಕೆಲವರು ಗಾಳಿಯನ್ನು ಬಿತ್ತಿ ಬಿರುಗಾಳಿಯನ್ನು ಕೊಯ್ಯುವ ಹಾಗೆ.

ಎಷ್ಟೋ ಜನರು ತಮ್ಮ ಚಿಕ್ಕ ಪ್ರಾಯದಲ್ಲಿ ಹೃದಯಾಘಾತವಾಗಿ ಸಾಯುತ್ತಿದ್ದಾರೆ. ಸಾಯುವಾಗ ಅನೇಕರು ಆಶ್ಚರ್ಯಪಡುತ್ತಾರೆ ನಿನ್ನೆ ಮೊನ್ನೆ ಸರಿಯಾಗಿದ್ದರಲ್ಲ ಇದು ಹೇಗೆ ಸಂಭವಿಸಿತು ಇದು ಅವನ ಹಣೆಬರಹ ಎಂದು ಹೇಳುತ್ತಾರೆ. ಪ್ರಿಯರೇ, ವಿಷಯ ಅದು ಅಲ್ಲ.

ನೀವು ಒಂದು ವೇಳೆ ಸೇವೆಮಾಡುವ ಸೇವಕರಾಗಿರಬಹುದು, ಅಧಿಕಾರಿಯಾಗಿರಬಹುದು, ಉದ್ಯಮ ನಡೆಸುವ ವ್ಯಾಪರಸ್ಥರಾಗಿರಬಹುದು, ಕುಟುಂಬಸ್ಥನಾಗಿರಬಹುದು ಅಥವಾ ನೀವು ಯಾರೇ ಆಗಿದ್ದರೂ ಸರಿಯೇ ನಿಮ್ಮ ಕುರಿತಾಗಿ ಮತ್ತು ಕುಟುಂಬದ ಕುರಿತಾಗಿ ವಿಷಯಗಳನ್ನು ಬೀದಿಗೆ ತರಬಹುದು ಅಥವಾ ನಿಮಗೆ ನೋವು ಆಗುವ ರೀತಿಯಲ್ಲಿ ನಡೆದುಕೊಂಡಿರಬಹುದು ಇಲ್ಲವೇ ನಿಮ್ಮ ಕೆಲಸದಲ್ಲಿ ಬಹಳ ನಷ್ಟ ಉಂಟು ಮಾಡಿರಬಹುದು ಅಥವಾ ಕೇಡು ಮಾಡಿರಬಹುದು, ಇಲ್ಲ ಸಲ್ಲದ ವಿಷಯಗಳ ಅಪಪ್ರಚಾರ ಮಾಡಿರಬಹುದು. ಅವರು ಒಳಭಾಗದ ಜನರಾಗಲಿ, ಹೊರಭಾಗದ ಜನರಾಗಲಿ.

ಇವತ್ತು ಕ್ರಿಸ್ತ ಯೇಸುವಿನಲ್ಲಿದ್ದವನಾಗಿ ನಾನು ನಿಮ್ಮೊಂದಿಗೆ ಬೇಡಿಕೊಳ್ಳುವ ವಿಷಯವೇನೆಂದರೆ ಕ್ಷಮಿಸುವುದು ಎಂದರೆ ಕೇವಲ ಬಾಯಿ ಮಾತಿನಲ್ಲಿ ಹೇಳಿ ಮುಗಿಸುವ ವಿಷಯವಲ್ಲ ಇದು ಸ್ವಾತಂತ್ರ್ಯಕ್ಕಿರುವ ದಾರಿಯಾಗಿದೆ, ಎಲ್ಲಾ ಬಾಗಿಲುಗಳನ್ನು ತೆರೆಯಲು ಶಕ್ತವಾದ ಬೀಗದ ಕೈ ಆಗಿದೆ, ರೋಗ ಸ್ವಸ್ಥತೆಗಿರುವ ಔಷಧಿಯಾಗಿದೆ, ಒಂದು ದೊಡ್ಡ ಮಾನಸಿಕ ಕ್ರಾಂತಿಗಿರುವ ಪದವಾಗಿದೆ. ನೀವು ದೇವರ ಕೈಗಳಲ್ಲಿ ಬಲವಾದ ಆಯುಧವಾಗುತ್ತೀರಿ.

ಒಂದು ವೇಳೆ ಕ್ಷಮಿಸದಿದ್ದರೆ ಅದು ಎಲುಬಿಗೆ ಕ್ಷಯವನ್ನುಂಟು ಮಾಡುತ್ತದೆ; ಆರೋಗ್ಯವನ್ನು ಹಾಳುಮಾಡುತ್ತದೆ; ಮಾನಸಿಕ ಸಂಘರ್ಷಕ್ಕೆ ನಡೆಸುತ್ತದೆ; ರಣರಂಗವನ್ನು ದೊಡ್ಡದು ಮಾಡುತ್ತದೆ; ನೀವು ಸೈತಾನನ ಕೈಗಳಲ್ಲಿ ಆಯುಧವಾಗಿ ಮಾರ್ಪಡುತ್ತೀರಿ.

ದೊಡ್ಡ ಸಮೂಹ ಬಂಧನದಿಂದ ಬಿಡುಗಡೆಹೊಂದಿ ರಕ್ಷಣೆ ಹೊಂದುವಂತೆ ಪ್ರಾರ್ಥಿಸುತ್ತೇವೆ. ದೇವರಿಗೆ ಸಮೂಹವಲ್ಲ ಮುಖ್ಯ. ದೇವರು ಮೊದಲು ನಿನ್ನಲ್ಲಿ ಆಸಕ್ತನಾಗಿದ್ದಾನೆ, ರಕ್ಷಣೆಹೊಂದಿ ಕಹಿಯಲ್ಲಿರುವುದಾದರೆ ಇನ್ನು ಪಾತಾಳದ ಬೆಂಕಿಯ ಸಮೀಪದಲ್ಲಿಯೇ ಇದ್ದೀ.

ಇವೆರಡರಲ್ಲಿ ಮುಂದಿನ ಆಯ್ಕೆ ನಿಮ್ಮದಾಗಿದೆ ಯಾವುದನ್ನು ಪ್ರೀತಿಸಿ ಮುಂದುವರಿಸುತ್ತೀರೋ ಅದರ ಪ್ರಕಾರವಾಗಿ ನಿಮ್ಮ ಜೀವಿತ ರೂಪುಗೊಳ್ಳುತ್ತದೆ.

**ಕ್ರಿಸ್ತ ಯೇಸುವಿನಲ್ಲಿದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ** (ಫಿಲಿ. 2:5).

ಕ್ಷಮಿಸಿ, ಪ್ರೀತಿಸುವ ಮೂಲಕ ಕ್ರಿಸ್ತನಿಗಾಗಿ ಒಂದು ನೂತನ ಲೋಕವನ್ನು ನಾವು ಕಟ್ಟೋಣ.

ಕರ್ತನು ತಾನೇ ನಿಮ್ಮೆಲ್ಲರನ್ನು ಚಿಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ, ಆಮೆನ್.

ಆದಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ (1 ಕೊರಿಂ. 10:12).

# ಪ್ರಶ್ನೋತ್ತರಗಳ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**1) ದೇವಪುತ್ರ ಮಾಬೆನ್ ಶಿವಮೊಗ್ಗ :** ಪ್ರಶ್ನೆ ನಾನು ರಕ್ಷಣೆಯನ್ನು ಹೊಂದಿ ಸುಮಾರು 12 ವರ್ಷಗಳಾಗಿವೆ. ಇಲ್ಲಿಯವರೆಗೆ ಒಂದು ದಿನ ಕೂಡ ಉಪವಾಸ ಮಾಡಿದ್ದಿಲ್ಲ. ಅನೇಕ ಕ್ರೈಸ್ತ ವಿಶ್ವಾಸಿಗಳು ಉಪವಾಸ ಮಾಡಲು ಪ್ರೋತ್ಸಾಹಿಸುತ್ತಾರೆ. ನನಗೆ ಉಪವಾಸ ಮಾಡಲು ಇಷ್ಟವಿದೆ. ಉಪವಾಸದ ಬಗ್ಗೆ ವಿವರವಾಗಿ ತಿಳಿಸುತ್ತೀರಾ.

**ಉತ್ತರ :–** ಕ್ರೈಸ್ತ ಜೀವಿತದಲ್ಲಿ ಉಪವಾಸ ಪ್ರಾರ್ಥನೆಯನ್ನು ಕೇವಲವಾಗಿ ಎಣಿಸಬಾರದು. ಸತ್ಯವೇದದಲ್ಲಿ ಉಪವಾಸ ಪ್ರಾರ್ಥನೆಗೆ ತುಂಬಾ ಪ್ರಾಮುಖ್ಯತೆಯನ್ನು ಕೊಡಲಾಗಿದೆ. ಹಳೆಒಡಂಬಡಿಕೆಯ ಭಕ್ತರೂ ಹೊಸ ಒಡಂಬಡಿಕೆಯ ಭಕ್ತರೂ ಉಪವಾಸ ಪ್ರಾರ್ಥನೆಯನ್ನು ಮಾಡುತ್ತಿದ್ದರು. ನಮ್ಮ ಜೀವ ನಾಯಕನಾದ ಯೇಸುಕ್ರಿಸ್ತನು ಕೂಡ ಉಪವಾಸ ಪ್ರಾರ್ಥನೆಗೆ ಪ್ರಾಮುಖ್ಯತೆಯನ್ನು ಕೊಟ್ಟಿರುವುದನ್ನು ಸತ್ಯವೇದದಲ್ಲಿ ಕಾಣಬಹುದು. ಸಾಧರಣ ಪ್ರಾರ್ಥನೆಯ ಮೂಲಕವಾಗಿ ಪಡಕೊಳ್ಳಲು ಸಾಧ್ಯವಾಗಿದ್ದನ್ನು ಉಪವಾಸ ಪ್ರಾರ್ಥನೆಯ ಮೂಲಕ ಪಡಕೊಳ್ಳಲು ಸಾಧ್ಯವಿದೆ. ಮೀಕ. 9:14–29 ರಲ್ಲಿ ಒಂದು ಘಟನೆಯನ್ನು ಕಾಣಬಹುದು. ಕರ್ತನಾದ ಯೇಸುಕ್ರಿಸ್ತನು ಯಾಕೋಬ, ಪೇತ್ರ, ಯೋಹಾನರೊಂದಿಗೆ ರೂಪಾಂತರ ಬೆಟ್ಟಕ್ಕೆ ಹೋದಾಗ ಒಬ್ಬ ತಂದೆಯು ದೆವ್ವ ಹಿಡಿದವನಾದ ಅವನ ಮಗನನ್ನು ಬಿಡಿಸುವುದಕ್ಕಾಗಿ ಯೇಸುವಿನ ಉಳಿದ ಶಿಷ್ಯರ ಬಳಿಗೆ ತರುತ್ತಾನೆ. ಆಗ ಶಿಷ್ಯರಿಗೆ ಈ ಹುಡುಗನನ್ನು ದೆವ್ವದ ಹಿಡಿತದಿಂದ ಬಿಡುಗಡೆ ಮಾಡಲು ಸಾಧ್ಯವಾಗಲಿಲ್ಲ. ಆಗ ಹುಡುಗನ ತಂದೆಯು ನಿರಾಶನಾಗಿ ಯೇಸುವಿನ ಬಳಿಗೆ ಬರುತ್ತಾನೆ. ಯೇಸು ಆಗ ತಾನೇ ರೂಪಾಂತರ ಬೆಟ್ಟದಿಂದ ಇಳಿದು ಬಂದಿದ್ದನು ಆತನು ಮಾರ್ಕ. 9:22 ಮತ್ತು ಇವನನ್ನು ಕೊಲ್ಲಬೇಕೆಂದು ಆಗಾಗ್ಗೆ ಬೆಂಕಿಯಲ್ಲಿಯೂ, ನೀರಿನಲ್ಲಿಯೂ ಕೆಡವಿತು. ನಿನ್ನ ಕೈಯಲ್ಲಿ ಆಗುವ ಹಾಗಿದ್ದರೆ ನಮ್ಮ ಮೇಲೆ ಕರುಣೆಯಿಟ್ಟು ನಮಗೆ ಸಹಾಯಮಾಡು ಅಂದನು. ಅದಕ್ಕೆ ಕರ್ತನಾದ ಯೇಸುಕ್ರಿಸ್ತನು ಮಾರ್ಕ. 9:23 ಯೇಸು ಅವನಿಗೆ ನಿನ್ನ ಕೈಲಿ ಆಗುವ ಆಗಿದ್ದರೆ ಅನ್ನುತ್ತೀಯೋ ನಂಬುವವನಿಗೆ ಎಲ್ಲಾ ಆಗುವುದು ಎಂದು ಹೇಳಿದನು. ಮಾರ್ಕ. 9:24 ಕೂಡಲೆ ಆ ಹುಡುಗನ ತಂದೆಯು ನಂಬುತ್ತೇನೆ ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯ ಮಾಡು ಎಂದು ಕೂಗಿ ಹೇಳಿದನು. ನಂತರ ಕರ್ತನಾದ ಯೇಸುಕ್ರಿಸ್ತನು ದೆವ್ವವನ್ನು ಗದರಿಸಿ ಆ ಹುಡುಗನನ್ನು ಸ್ವಸ್ಥಪಡಿಸುವುದನ್ನು ಕಾಣುತ್ತೇವೆ. ನಂತರ ಶಿಷ್ಯರು ಬಂದು ಕರ್ತನಾದ ಯೇಸುಕ್ರಿಸ್ತನಿಗೆ ಪ್ರಶ್ನೆಯನ್ನು ಕೇಳುವುದನ್ನು ನೋಡಬಹುದು. ಮಾರ್ಕ. 9:28 ಯೇಸು ಮನೆಗೆ ಬಂದಾಗ ಅವನ ಶಿಷ್ಯರು ಅದನ್ನು ಬಿಡಿಸಲಿಕ್ಕೆ ನಮ್ಮಿಂದ ಯಾಕೆ ಆಗಲಿಲ್ಲ ಎಂದು ಆತನನ್ನು ಏಕಾಂತದಲ್ಲಿ ಕೇಳಲು ಮಾರ್ಕ. 9:29ರಲ್ಲಿ ಕರ್ತನು ಈ ರೀತಿ ಉತ್ತರಿಸುತ್ತಾನೆ, ಈ ಜಾತಿಯು ದೇವರ ಪ್ರಾರ್ಥನೆ ಮತ್ತು ಉಪವಾಸದಿಂದಲೇ ಹೊರತು ಬೇರೆ ಉಪಾಯದಿಂದಲೂ ಬಿಟ್ಟು ಹೋಗುವುದಿಲ್ಲವೆಂದೂ ಅವರಿಗೆ ಹೇಳಿದನು.

**ಇದರಿಂದ ನಾವು ಕಲಿಯುವ ವಿಷಯಗಳು :**

1. ಉಪವಾಸ ಪ್ರಾರ್ಥನೆ ಆತ್ಮೀಕ ಜೀವಿತದಲ್ಲಿ ಪ್ರಾಮುಖ್ಯವಾದದ್ದು.
2. ಕೆಲವು ಸಂಗತಿಗಳ ಬಿಡುಗಡೆಗೆ ಉಪವಾಸ ಪ್ರಾರ್ಥನೆಯು ಅತೀ ಅವಶ್ಯಕವಾದುದ್ದು.
3. ನಮ್ಮ ಸಭೆಯಲ್ಲಿ ಪ್ರತಿ ವರ್ಷ 40,21,14,7,3 ದಿನ ಹೀಗೆ ಅನೇಕ ಸಲ ಉಪವಾಸ ಪ್ರಾರ್ಥನೆಯನ್ನು ಸಭೆಯಾಗಿ ಇಡುತ್ತೇವೆ. ಅನೇಕರು ಇದರ ಪ್ರಯೋಜನ ಪಡೆದು ಆಶೀರ್ವದಿಸಲ್ಪಟ್ಟಿದ್ದಾರೆ. ನಮ್ಮ ಸಭೆಯಲ್ಲಿ ಯಾರೂ ಕೂಡ ಉಪವಾಸ ಪ್ರಾರ್ಥನೆಯನ್ನು ಅಸಡ್ಡೆ ಮಾಡುವುದಿಲ್ಲ. 1 ಸಮು. 1:10–18 ರಲ್ಲಿ ಹನ್ನಳ ಬಗ್ಗೆ ಓದುತ್ತೇವೆ. ಹನ್ನಳು ಸಾಧರಣವಾಗಿ ಅನೇಕ ಸಲ ಪ್ರಾರ್ಥಿಸಿದಳು ಆದರೆ ಕೊನೆಗೆ ಉಪವಾಸದೊಂದಿಗೆ ಪ್ರಾರ್ಥಿಸಿದಾಗ ಕರ್ತನು ಅದ್ಭುತವಾಗಿ ಹನ್ನಳನ್ನು ಆಶೀರ್ವದಿಸುವುದನ್ನು ಕಾಣುತ್ತೇವೆ.

**ಉಪವಾಸ ಪ್ರಾರ್ಥನೆಗೆ ಒಂದು ಕಾರಣ ಇರಬೇಕು :– "ಆ ಮೇಲೆ ಆ ಅಹವಾ ನದಿಯ ಬಳಿಯಲ್ಲಿ ನಾವು ಉಪವಾಸದಿಂದಿದ್ದು ನಮ್ಮ ದೇವರ ಮುಂದೆ ನಮ್ಮನ್ನು ತಗ್ಗಿಸಿಕೊಂಡು ನಮಗೂ ನಮ್ಮ ಮನೆಯವರಿಗೂ ನಮ್ಮ ಎಲ್ಲಾ ಆಸ್ತಿಗೂ ಪ್ರಯಾಣದಲ್ಲಿ ಶುಭವನ್ನು ಕೇಳಿಕೊಳ್ಳಬೇಕೆಂದು**

ನೀವು ಸ್ವಲ್ಪಕಾಲ ಬಾಧೆಪಟ್ಟ ಮೇಲೆ ನಿಮ್ಮನ್ನು ಯೋಗ್ಯಸ್ಥಿತಿಗೆ ತಂದು ನೆಲೆಗೊಳಿಸಿ ಬಲಪಡಿಸುವನು (1 ಪೇತ್ರ 5:10).

ಪ್ರಕಟಿಸಿದೆನು. ನಮ್ಮ ದೇವರ ಹಸ್ತವು ಆತನ ಎಲ್ಲಾ ಶರಣಾರ್ಥಿಗಳನ್ನೂ ಪಾಲಿಸುವದು; ಆತನ ಬಲವಾದ ರೌದ್ರಕ್ಕೆ ಆತನನ್ನು ತೊರೆದುಬಿಟ್ಟವರೆಲ್ಲರೂ ಗುರಿಯಾಗುವರು ಎಂದು ನಾವು ಅರಸನ ಮುಂದೆ ಹೇಳಿದ್ದರಿಂದ ದಾರಿಯಲ್ಲಿ ನಮ್ಮನ್ನು ಶತ್ರುಗಳಿಂದ ರಕ್ಷಿಸುವದಕ್ಕೋಸ್ಕರ ಸೈನ್ಯವನ್ನೂ ಅಶ್ವಬಲವನ್ನೂ ಕೇಳಿಕೊಳ್ಳುವದಕ್ಕೆ ನಾಚಿಕೊಂಡಿದ್ದೆನು. ನಾವು ಈ ಕಾರಣದಿಂದ ಉಪವಾಸ ಮಾಡಿ ದೇವರನ್ನು ಪ್ರಾರ್ಥಿಸಲು ಆತನು ನಮಗೆ ಪ್ರಸನ್ನನಾದನು" (ಎಜ್ರ. 8:21–23). "ತನ್ನ ಆತ್ಮವನ್ನು ಕುಂದಿಸಿಕೊಳ್ಳುವುದಕ್ಕಾಗಿ ನಾನು ನೇಮಿಸಿದ ಉಪವಾಸದಿನವು ಇಂಥದೋ? ಒಬ್ಬನು ಜೊಂಡಿನಂತೆ ತಲೆಯನ್ನು ಬೊಗ್ಗಿಸಿಕೊಂಡು ಗೋಣೀತಟ್ಟನ್ನೂ ಬೂದಿಯನ್ನೂ ಆಸನಮಾಡಿಕೊಳ್ಳುವದು ಯೆಹೋವನಿಗೆ ಸಮರ್ಪಕವಾದ ಉಪವಾಸ ಎನ್ನುತ್ತೀರೋ?"(ಯೆಶಾ. 58:5).

ಅಪೋ. 13:1–3 ಅಂತಿಯೋಕ್ಯದಲ್ಲಿದ್ದ ಸಭೆಯೊಳಗೆ ಬೋಧಕರೂ ಇದ್ದರು. ಯಾರಾರೆಂದರೆ ಬಾರ್ನಬ, ನೀಗರೆನೆಂಬ ಸೀಮೆಯೋನ ಕುರೇನ್ಯದ ಲೂಕ್ಯ ಉಪರಾಜನಾದ ಹೆರೋದನ ಸಾಕು ತಮ್ಮನಾದ ಮೆನಹೇನ, ಸೌಲ ಇವರೇ. ಇವರು ಕರ್ತನನ್ನು ಸೇವಿಸುತ್ತಾ ಉಪವಾಸ ಮಾಡುತ್ತಾ ಇದ್ದಾಗ ಪವಿತ್ರಾತ್ಮನು ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿದ್ದಿ ಎಂದು ಹೇಳಿದನು. ಆಗ ಅವರು ಉಪವಾಸವಿದ್ದು ಪ್ರಾರ್ಥನೆ ಮಾಡಿ ಆ ಇಬ್ಬರ ಮೇಲೆ ಹಸ್ತಾರ್ಪಣೆ ಮಾಡಿ ಅವರನ್ನು ಕಳುಹಿಸಿಕೊಟ್ಟರು.

ಅ.ಕೃ. 14:23 ಇದಲ್ಲದೆ ಪ್ರತಿ ಸಭೆಯಲ್ಲಿ ಸಭೆಯವರ ಸಮ್ಮತಿಯಿಂದ ಹಿರಯರನ್ನು ಗೊತ್ತುಮಾಡಿ ನೇಮಿಸಿ ಉಪವಾಸವಿದ್ದು ಪ್ರಾರ್ಥನೆ ಮಾಡಿ ಅವರು ನಂಬಿದ್ದ ಕರ್ತನ ಕೈಗೆ ಅವರನ್ನು ಒಪ್ಪಿಸಿದರು.

ಮುಂದುವರೆಯುವದು.......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

---

## ಆಶ್ರಮದ ಅವಶ್ಯಕತೆಗಳು

1. **30 ಟೇಬಲ್**
2. **60 ಬೆಂಚ್**
3. **ಟೆಂಪೋ ಟ್ರಾವಲ್ಸ್**
4. **ಅಕ್ಕಿ, ಸಕ್ಕರೆ, ದವಸಧಾನ್ಯ**

**ದಾನಿಗಳು : ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ**

**9902334941, 08202002781, 09964070654.**

---

## ನಗೆಹನಿ

* ಗುಂಡ ಹೊಸ ಕಲರ್ ಟಿ.ವಿ. ತೆಗೆದುಕೊಂಡು ಬಂದೆ. ಬಾಕ್ಸ್‌ನಿಂದ ಟಿ.ವಿ. ಹೊರತೆಗೆಯುವುದನ್ನೇ ಎಲ್ಲರೂ ಕಾಯುತ್ತಿದ್ದರು.

ಗುಂಡ ಟಿ.ವಿ. ಯನ್ನು ಹೊರಗೆ ತೆಗೆದು ಕೂಡಲೆ ಬಚ್ಚಲಮನೆಗೆ ಒಯ್ದು ನೀರಿನ ತೊಟ್ಟಿಯಲ್ಲಿ ಅದ್ದಿದ. ಯಾಕೆ ಗೊತ್ತೆ?

ಕಲರ್ ಹೋಗುತ್ತೊ, ಇಲ್ಲವೊ ಎಂದು ಪರೀಕ್ಷೆ ಮಾಡುವುದಕ್ಕೆ!!

ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ

(ಯಾಕೋ. 5:16).



12 ಹೊಸ ದಿಗಂತ

# ಐವರಿಗೆ 'ವಿಶ್ವಾಸದ ಮನೆ' ಪುನರ್ಜನ್ಮ



ವಿಶ್ವಾಸದ ಮನೆ ಅನಾಥಾಶ್ರಮಕ್ಕೆ ಐದು ದಾನಿಗಳು ದಾನವಾಗಿ ನೀಡಿದ 1,300 ಬಾಳೆಗಿಡಗಳನ್ನು ಜೆಡಿಎಸ್ ಅಧ್ಯಕ್ಷರಾದ ಶ್ರೀಮಾನ್ ದೇವಿಪ್ರಸಾದ್ ಶೆಟ್ಟಿಯವರು ನೆಡುವುದರ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಧ್ವರಾಜ್ ಸುವರ್ಣ, ಕಾಪು ಮುಸ್ತಾಕ್, ಇನ್ನಂಜೆ ಪಂಚಾಯತ್ ಅಧ್ಯಕ್ಷೆ ವಂಸತಿ ಆಚಾರ್ಯ ಮತ್ತು ಅನೇಕ ಗಣ್ಯರು ಉಪಸ್ಥಿತರಿದ್ದರು.

ನಿನ್ನ ವಾಕ್ಯ ವಿವರಣೆಯಿಂದ ಯುಕ್ತಿಹೀನರಿಗೆ ಜ್ಞಾನೋದಯವಾಗುವುದು
(ಕೀರ್ತ. 119:130).

ನಮ್ಮ ಕರಾವಳಿ

## ವಿಶ್ವಾಸದ ಮನೆಯಿಂದ ತಮ್ಮೂರಿಗೆ ಹೊರಟ ಮಂದಿಯ ಕಣ್ಣೀರ ಕಥೆ

# 22 ವರ್ಷದ ಬಳಿಕ ಕಲ್ಯಾಣಿ ಕುಟುಂಬ ತೆಕ್ಕೆಗೆ



### ಆಶ್ರಮ ಸೇರಿದ ಕಥೆ

# ಶಂಕರಪುರ ವಿಶ್ವಾಸದ ಮನೆಯಿಂದ ಸ್ವಂತ ಮನೆಗೆ ಆತ್ಮವಿಶ್ವಾಸದ ನಡಿಗೆ



ಕರ್ತನ ಮುಂದೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆಗಲಾತನು ನಿಮ್ಮನ್ನು ಮೇಲಕ್ಕೆ ತರುವನು (ಯಾಕೋ. 4:10).

## ಇನ್ನೊ ಐವರು ಗುಣಮುಖ, ಊರಿನತ್ತ ಪಯಣ...



'ವಿಶ್ವಾಸದ ಮನೆ' ಪುನರ್ವಸತಿ ಕೇಂದ್ರ

## ಐವರಿಗೆ ಹೊಸ ಬದುಕು; ಮರಳಿ ಮನೆಗೆ



ಕ್ರಿಸ್ತನಂಬಿಕೆಯುಳ್ಳವರು ಮಾಡತಕ್ಕ ಶ್ರೇಷ್ಠ ಹೋರಾಟವನ್ನು ಮಾಡು (1 ತಿಮೊ. 6:12).

# ಬೆತೆಲ್

ಕಳೆದ ಸಂಚಿಕೆಯಿಂದ ಮುಂದುವರಿದಿದೆ.

ಎಸಾವ್ ಆಪ್ಣಾಚಿಂ ಬೆಸಾಂವಾಂ ಜಾಕೊಬಾ ಆದೀನ್ ಜಾಲ್ಲ್ಯಾನ್ ರಾಗಾನ್ ಖುಬಳ್ಳೊ ಆನಿಂ ಜಾಕೊಬಾಕ್ ಲಗಾಡ್ ಕಾಡುಂಕ್ ಜಿದ್ದಾನ್ ಭರ್‍ಲೊ. ಹೆಂ ಸಮ್ಜಾಲ್ಲಿ ರೆಬೆಕಾ ಜಾಕೊಬಾಕ್ ದರ್ವಡೆನ್ ಮ್ಹಳ್ಳೆಪರಿಂ ಆಪ್ಲ್ಯಾ ಭಾವಾ ಲಾಬಾನಾ ಸರ್ಶಿಂ ಒಸುಂಕ್ ಒತ್ತಾಯ್ ಕರಿಲಾಗ್ಲಿ. ಅಶೆಂ ಉಟಾಉಟಿಂ ಜಾಕೊಬ್ ಬೆರ್ಶೆಬಾ ಥಾವ್ನ್ ಆಪ್ಲ್ಯಾ ಮಾವ್ಲ್ಯಾಚ್ಯೊ ಗಾಂವ್ ಹಾರಾನಾಕ್ ಭಾಯ್ರ್‌ಸರ್‍ನ್ ಗೆಲೊ. ಪಯ್ಣಾರ್ ಆಸ್ತಾನಾ ರಾತ್ ಪಾಶಾರ್ ಕರುಂಕ್ ಎಕಾ ಸುವಾತೆರ್ ಮಾತ್ಯಾಪಂದಾ ಫಾತರ್ ಉಶ್ಯಾಬರಿಂ ದವ್ರುನ್ ನಿದ್ಲೊ. ತವಳ್ ತಾಕಾ ಎಕ್ ಸ್ವಪಾಣ್ ಪಡ್ಲೆಂ. ಸ್ವಪ್ಣಾಂತ್ ಧರ್ಣಿ ಥಾವ್ನ್ ಆಕಾಸಾಕ್ ತೆಂಕಲ್ಲಿ ನಿಸಣ್ ತಾಣೆಂ ದೆಖ್ಲಿ. ಆನಿಂ ತ್ಯಾ ನಿಸ್ಣಿಥಾವ್ನ್ ದೇವದೂತ್ ವಯ್ರ್ ಸಕಯ್ಲ್ ದೆಂವ್ತಲೆ ತೆದ್ನಾ ವಯ್ರ್ ಥಾವ್ನ್ ಸರ್ವೆಸ್ಪರ್ ದೇವ್ **"ಹಾಂವ್ ತುಜ್ಯಾ ಪುರ್ವಜಾಂಚೊ, ಆಬ್ರಾಹಾಮಾಚೊ, ಇಜಾಕಾಚೊ ದೇವ್! ಅನಿಂ ಹಿ ಸುವಾತ್ ತುಜೆ ಪಿಳ್ಗೆಕ್ ದಿತಲೊಂ.... ತುಜೆ ಸಂತತೆ ವರ್ವಿಂ ಸರ್ವ್ ಕುಳಿಯಾಂಚೆರ್ ಆಶಿರ್ವಾದ್ ಪಡ್ತಲೆಂ... ತುಕಾ ಭಾಸಯಿಲ್ಲೆಂ ಸಗ್ಳೆಂ ಜ್ಯಾರಿ ಜಾಯ್ಸರ್ ಹಾಂವ್ ತುಜೆ ಬರಾಬರ್ ಆಸ್ತಲೊಂ!"** ಮ್ಹಣಾಲಾಗ್ಲೊ. ಥೊಡ್ಯಾ ವೆಳಾನ್ ಜಾಕೊಬಾಕ್ ಜಾಗ್ ಜಾಲಿ. ತಾಣೆಂ ಉಟೊನ್ ತ್ಯಾ ಉಶ್ಯಾಬರಿಂ ದವರಿಲ್ಲ್ಯಾ ಫಾತ್ರಾಚೆರ್ ತೇಲ್ ಒತುನ್ ತ್ಯಾ ಫಾತ್ರಾಕ್ "ಉಗ್ಡಾಸಾ ಫಾತರ್" ಮ್ಹಣ್ ಉಬಾರ್‍ಲೊ. ಆನಿಂ ತ್ಯಾ ಜಾಗ್ಯಾಕ್ "ಬೆತೆಲ್" ಮ್ಹಣ್ ನಾಂವ್ ದಿಲೆಂ. ಉಪ್ರಾಂತ್ ಸರ್ವೆಸ್ಪರ್ ದೇವಾನ್ ದಿಲ್ಲ್ಯಾ ಸರ್ವ್ ಸಂಗ್ತೆನಿಂ ಧಾಂತ್ ಎಕ್ ವಾಂಟೊ ಸರ್ವೆಸ್ಪರ್ ದೇವಾಕ್ ದಿತಲೊಂ ಮ್ಹಳ್ಳಿ ಆಂಗವ್ಣ್ ಜಾಕೊಬಾನ್ ಸರ್ವೆಸ್ಪರ್ ದೇವಾ ಹುಜ್ರಿಂ ಕೆಲಿ.

(ಬೆತೆಲ್ =ದೇವಾಚೆಂ ಘರ್).

ಜುಜೆ. ಬೆತೆಲಾ ಥಾವ್ನ್ ಜಾಕೊಬಾನ್ ಪಯ್ಣ್ ಮುಂದರ್ಸಿಲೆಂ ಚಲಾತ್ ಚಲಾತ್ತ್ ತೊ ಆದಿಂ ಎಲಿಯೆಜರ್ ರೆಬೆಕಾ ಭೆಟಲ್ಲ್ಯಾ ಬಾಂಯ್ ಸರ್ಶಿಂ ಪಾವ್ಲೊ. ತವಳ್ ಎಕ್ ಬೋವ್ ಸೊಬಿತ್ತ್ ಚಲಿ ಆಪ್ಲ್ಯಾ ಹಿಂಡಾಕ್ ಘೆವ್ನ್ ಬಾಂಯ್ ಸರ್ಶಿಂ ಯೆತಾಲಿ ತೆಂ ಜಾಕೊಬಾನ್ ದೆಖ್ಲೆಂ. ತೆದ್ನಾ ತಾಣೆಂ ಬಾಂಯ್ ಸರ್ಶಿಂ ಆಸಲ್ಲ್ಯಾ ದುಸ್ರ್ಯಾ ಹಿಂಡಾಚ್ಯಾ ಗೊವ್ಳ್ಯಾಲಾಗಿಂ ತ್ಯಾ ಚಲಿಯೆ ವಿಶ್ಯಾಂತ್ ವಿಚಾರ್ ಕೆಲೊ. ತಾಚೆಂ ನಾಂವ್ "ರೆಕಲ್". ಆನಿಂ ತೆಂ ಲಾಗಿಂ ಪಾವ್ತಚ್ ಜಾಕೊಬಾನ್ ರೆಕೆಲಾಕ್ ಆಪ್ಣಾಚಿ ಒಳೊಕ್ ಕರುನ್ ದಿಲಿ. ತಶೆಂ ಜಾಕೊಬ್ ರೆಕೆಲಾಚ್ಯಾ ಮೋಗಾರ್ ಪಡ್ಲೊ. ಜಾಕೊಬಾ ಮೆಳಲ್ಲಿ ಖಬರ್ ರೆಕೆಲಾನ್ ಆಪ್ಲ್ಯಾ ಬಾಪಯ್ಕ್ ಲಾಬಾನಾಕ್ ಸಾಂಗ್ಲಿ. ಲಾಬಾನ್ ಘರಾಂತ್ ಥಾವ್ನ್ ಭಾಯ್ರ್ ಆಯ್ಲೊ ಆನಿಂ ಆಪ್ಲ್ಯಾ ಭಯ್ಣಿಚ್ಯಾ ಪುತಾಕ್ ಜಾಕೊಬಾಕ್ ವೇಂಗ್ ಮಾರುನ್ ತಾಕಾ ಬರೊ ಯೆವ್ಕಾರ್ ಮಾಗ್ಲೊ. ಸಗ್ಳಿಂ ಘರಾಂತ್ ಭಿತರ್ ಸರ್ತಚ್ ಜಾಕೊಬಾನ್ ಸಗ್ಳಿ ಗಜಾಲ್ ಲಾಬಾನಾಕ್ ತಿಳ್ಸಿಲಿ. **"ತುಂ ಮ್ಹಜೊ ರಕ್ತಾ ಸಂಬಂಧಿ ತುಕಾ ಹಾಂವ್ ಸಾಂಬಾಳ್ತಲೊಂ"** ಮ್ಹಣ್ ಲಾಬಾನಾನ್ ಧೈರ್ ದಿಲೆಂ.

ಜಾಕೊಬ್ ರೆಕೆಲಾಚ್ಯಾ ಮೊಗಾರ್ ಪಡಲ್ಲ್ಯಾನ್ ತಾಚ್ಯಾ ಸಂಗಿಂ ಕಾಜಾರ್ ಜಾಂವ್ಚ್ಯಾಕ್ ಶರ್ತಾಂ ಬರಾಬರ್ ಸಾತ್ ವರ್ಸಾಂ ಲಾಬಾನಾ ಸಂಗಿಂ ಘೊಳ್ಳೊ. ಮೋಗಾ-ಮಯ್ಪಾಸಾಂತ್ ಸಾತ್ ವರ್ಸಾಂ ಜಾಕೊಬಾಕ್ ಥೊಡ್ಯಾಚ್ಚ್ ದಿಸಾಂ ಬರಿಂ ಭಗ್ಲಿಂ. ಶರ್ತಾಂಚೊ ಕಾಳ್ ಸಂಪ್ತಚ್ ಲಾಬಾನಾನ್ ಜಾಕಾಬಾಚೆಂ ಲಗ್ನಾ- ಸೊಭಾಣ್ ದವರ್ಲೆಂ. ಲಗಿನ್ ಜಾಲ್ಲ್ಯಾ ಉಪ್ರಾಂತ್ ಜಾಕೊಬಾಕ್ ಕಳೊನ್ ಆಯ್ಲೆಂಕೀ ಲಾಬಾನಾನ್ ತಾಚೆಸಂಗಿಂ ಲಗ್ನ್ ಕರ್ನ್ ದಿಲ್ಲೆಂ ಚೆಡುಂ ರೆಕೆಲ್ ನಹಿಂ ಬಗಾರ್ ರೆಕೆಲಾಚೆಂ ವ್ಹಡ್ಲೆಂ ಭಯ್ಣ್ ಲೇಯಾ ಮ್ಹಣ್. ಅಶೆಂ ಫಟ್ವಾಲ್ಲೊ ಜಾಕೊಬ್ ಲಾಬಾನಾಕಡೆಂ ದುಸ್ರಾತಾನಾ, "ಆಮಿಂ ಆಮ್ಚ್ಯಾ ಕುಟ್ಮಾಂತ್ ಪಯ್ಲೆಂ ವ್ಹಡ್ಲ್ಯಾಚೆಂ ಉಪ್ರಾಂತ್ ಧಾಕ್ಟ್ಯಾಚೆಂ ಕಾಜಾರ್ ಕರುನ್ ದಿತಾಂವ್ ಹಿ ಆಮ್ಚಿ ರೆಕೆಲಾ ಲಾಗಿಂ ಲಗನ್ ಜಾಲೊ. ಜಾಕೊಬಾಕ್ ಲೇಯಾ ಆನಿಂ ತಿಚಿ ಚಾಕ್ರಾ ಬಾಯ್ಲ್ ತಸೆಂಚ್ಚ್ ರೆಬೆಕಾಚ್ಯಾ ಚಾಕ್ರಾ ಬಾಯ್ಲೆ ಥಾವ್ನ್ ಧಾ ಜಣಾಂ ಭುರ್ಗಿಂ ಜಾಲಿಂ. ರೆಕೆಲಾಕ್ ಜಾಯ್ತೊ ತೇಂಪ್ ಭುರ್ಗಿಂ ಜಾಲಿಂ ನಾಂತ್ ಉಪ್ರಾಂತ್ ಸರ್ವೆಸ್ಪರ್ ದೇವಾಚ್ಯಾ ದಯೇನ್ ತಾಕಾ ಎಕ್ ಚೆರ್‍ಕೊ ಜಲ್ಮಾಲೊ ತಾಣೆಂ ತಾಚೆಂ ನಾಂವ್ "ಜುಜೆ" ಮ್ಹಣ್ ದವರ್ಲೆಂ. ಜಾಕೊಬ್ ರೆಕೆಲಾಚೊ ಆನಿಂ ಜುಜೆಚೊ ಮಸ್ತ್ ಮೋಗ್ ಕರ್ತಾಲೊ. ಥೊಡ್ಯಾಚ್ ತೆಂಪಾನ್ ರೆಬೆಕಾಕ್ ಬೆಜ್ಮಿ ಜಾಲೊ. ಅಶೆಂ ಜಾಕೊಬ್ ಬಾರಾ ಭುರ್ಗ್ಯಾಂಚೊ ಬಾಪಯ್ ಜಾಲೊ.

(ಜುಜೆ ವ ಜೊಸೆಫ್ = ಪರಿಹಾರ್ ವ ದೇವಾಚಿ ದಯಾ).

ಮುಂದುವರಿಯುವದು.......

**ಬರಯ್ಣಾರ್: ಜೆ ಜುದಾಸ್**

*(ಡೇವಿಡ್ ಲುವಿಸ್ ತಲ್ಲುರ್).*

ನಿಮ್ಮನ್ನು ಕರೆಯುವವನು ನಂಬಿಗಸ್ತನು, ಆತನು ತನ್ನ ಕಾರ್ಯವನ್ನು ಸಾಧಿಸುವನು (1 ಥೆಸ. 5:24).

## ಆರೋಗ್ಯ ಸ್ವರ

# ಬ್ಲಾಕ್ ಹೆಡ್ಸ್ ವೈಟ್ ಹೆಡ್ಸ್ ಸಮಸ್ಯೆಯೇ?

ಅಂದದ ಮುಖಕ್ಕೆ ದೃಷ್ಟಿ ತಾಗದಿರಲಿ ಎಂದು ಕಪ್ಪು ಚುಕ್ಕೆ ಇಡುತ್ತಾರೆ. ಆದರೆ ಅದೇ ಮುಖದಲ್ಲಿ ಬ್ಲಾಕ್ ಹೆಡ್ಸ್‌ಗಳು ಹೆಚ್ಚಾದರೆ ಎಷ್ಟೇ ಸುಂದರವಾಗಿದ್ದರೂ ಸೌಂದರ್ಯ ಹಾಳಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಇದನ್ನು ಹೋಗಲಾಡಿಸಲು ಎಷ್ಟೆಲ್ಲ ಹರಸಾಹಸ ಮಾಡುತ್ತಾರೆ. ನೀವು ಯಾವುದೇ ಚಿಕಿತ್ಸೆಯನ್ನು ಮಾಡಿಕೊಳ್ಳಿ. ಆದರೆ ಮುಖಕ್ಕೆ ಮುನ್ನ ಆ ಸಮಸ್ಯೆಯ ಮೂಲವನ್ನು ತಿಳಿದುಕೊಂಡು ನಂತರ ಅದರ ಚಿಕಿತ್ಸೆ ಮಾಡಿಕೊಳ್ಳಿ. ಈ ಬ್ಲಾಕ್ ಹೆಡ್ಸ್ ಬರುವುದು ಹೀಗೆ... ನಮ್ಮ ಚರ್ಮದಲ್ಲಿರುವ ತೈಲಗ್ರಂಥಿಗಳಿಂದು ಉತ್ಪತ್ತಿಯಾಗುವ ನೈಸರ್ಗಿಕ ತೈಲವು ಅತಿಹೆಚ್ಚಾಗಿ ಉತ್ಪತ್ತಿಯಾದರೆ ಈ ರೀತಿ ಚರ್ಮದ ಸಮಸ್ಯೆ ಉಂಟಾಗುತ್ತದೆ. ಮನೆಯಲ್ಲೇ ಇದನ್ನು ಸುಲಭವಾಗಿ ನಿವಾರಿಸಿಕೊಳ್ಳಬಹುದು.

* ಒಂದು ಪಾತ್ರೆಯಲ್ಲಿ ಸ್ವಲ್ಪ ನೀರು ಹಾಗೂ ಒಂದು ಚಮಚ ಅಡಿಗೆ ಸೋಡ ಬೆರೆಸಿ ಬಿಸಿಮಾಡಿ ಅದರಿಂದ ಬರುವ ಹಬೆಯನ್ನು ತೆಗದುಕೊಳ್ಳಿ.
* ಪ್ರತಿದಿನ 2–3 ಬಾರಿ ಬಿಸಿ ನೀರಿನಿಂದ ಮುಖ ತೊಳೆದುಕೊಳ್ಳಿ.
* ಸ್ನಾನದ ನೀರಿಗೆ ಅರ್ಧ ನಿಂಬೆರಸವನ್ನು ಬೆರೆಸಿ.
* ಸಕ್ಕರೆ ಅಥವಾ ಉಪ್ಪಿನಿಂದ ಪ್ರತಿದಿನ ಸ್ಕ್ರಬ್ ಮಾಡಿ.
* ಸ್ಟ್ರಾಬೆರಿ ಪಲ್‌ನಿಂದ ಮಸಾಜ್ ಮಾಡಿ.
* ಅಕ್ಕಿ ಹಿಟ್ಟಿಗೆ ನಿಂಬೆರಸ ಬೆರೆಸಿ ಸ್ಕ್ರಬ್ ಮಾಡಿ.
* ಮೂಸಂಬಿ ಅಥವಾ ಕಿತ್ತಲೆ ಸಿಪ್ಪೆಯನ್ನು ಅರೆದು ಸ್ಕ್ರಬ್‌ನಂತೆ ಉಪಯೋಗಿಸಿ.
* ಕಡಲೇಹಿಟ್ಟಿಗೆ ಮಸೂರ್‌ದಾಲ್ ಹಿಟ್ಟನ್ನು ಬೆರೆಸಿ ನಿಂಬೆರಸದಲ್ಲಿ ಕಲೆಸಿ ಸ್ಕ್ರಬ್ ಮಾಡಿ.
* ಸೀಗೇಕಾಯಿ, ಚಿಗರೆಪುಡಿಯಿಂದಲೂ ಸ್ಕ್ರಬ್ ಮಾಡಬಹುದು.

ಸಿಗಡಿ ಪ್ರೈಡ್ ರೈಸ್ ಸಾಮಗ್ರಿ : 1/2 ಕೆಜಿ ಸಿಗಡಿ, 1 ಕಪ್ ಅನ್ನ, 2 ಈರುಳ್ಳಿ, 5–6 ಬೆಳ್ಳುಳ್ಳಿ, ಸಣ್ಣ ಶುಂಠಿ, 7–8 ಹಸಿಮೆಣಸು, 1/2 ಚಮಚ ಕಾಳು ಮೆಣಸಿನ ಪುಡಿ, 2 ಚಮಚ ಚಿಲ್ಲಿ ಸಾಸ್, 1/2 ಚಮಚ ಸೋಯಾ ಸಾಸ್, ಚಿಟಿಕೆ ಅಜಿನೋ ಮೋಟೊ, ಉಪ್ಪು, ಎಣ್ಣೆ, ಬೇಕಾದಲ್ಲಿ ಉದ್ದಕ್ಕೆ ಹೆಚ್ಚಿದ ಕ್ಯಾಬೇಜ್

ವಿಧಾನ : ಹಸಿಮೆಣಸು, ಪಾತ್ರೆಯಲ್ಲಿ ಎಣ್ಣೆ ಬಿಸಿ ಮಾಡಿ ಅದಕ್ಕೆ ಶುಂಠಿ ಬೆಳ್ಳುಳ್ಳಿ ಪೆಸ್ಟನ್ನು ಹಾಕಿ ನಂತರ ಸಣ್ಣಗೆ ಹೆಚ್ಚಿದ ಈರುಳ್ಳಿ, ಉದ್ದಕ್ಕೆ ಕತ್ತರಿಸಿದ ಹಸಿಮೆಣಸು ಹಾಕಿ ಸಣ್ಣ ಉರಿಯಲ್ಲಿ ಪ್ರೈ ಮಾಡಬೇಕು. ನಂತರ ಚಿಲ್ಲಿ ಸಾಸ್, ಸೋಯಾ ಸಾಸ್, ಚಿಟಿಕಿ ಅಜಿನೋ ಮೋಟೊ, ಕಾಳು ಮೆಣಸಿನ ಪುಡಿ ಹಾಕಿ ಸ್ವಲ್ಪ ಪ್ರೈ ಮಾಡಿ ಸಿಗಡಿಯನ್ನು ಹಾಕಿ 10 ನಿಮಿಷ ಚೆನ್ನಾಗಿ ಪ್ರೈ ಮಾಡಬೇಕು. ಸಿಗಡಿ ಬೆಂದ ನಂತರ ಅದರಲ್ಲಿ ಅನ್ನವನ್ನು ಹಾಕಿ ರುಚಿಗೆ ಉಪ್ಪನ್ನು ಹಾಕಿ ಚೆನ್ನಾಗಿ ಕಲಸಬೇಕು. ಸಿಗಡಿ ರೈಸ್ ರೆಡಿ ಆದ ನಂತರ ತಟ್ಟೆಯಲ್ಲಿ ಹಾಕಿ ಮೇಲೆ ಬೇಕಾದಲ್ಲಿ ಮಾತ್ರ ಉದ್ದಕ್ಕೆ ಹೆಚ್ಚಿದ ಕ್ಯಾಬೇಜ್‌ನ್ನು ಹಾಕಿ ತಿನ್ನಲು ಕೊಡಿ.

– ಸಂಗ್ರಹ.

## ಡಿಜಿಎಮ್ ಬೇತೇಲ್ ಅಂಕಣ

- **ಮಾನಸಿಕ ಅಸ್ವಸ್ಥರಾಗಿ ಬೀದಿ ಬೀದಿಗಳಲ್ಲಿ ಅಲೆದಾಡುತ್ತಿದ್ದ ವಿಶ್ವಾಸ್, ದಯಾನಂದ ಶೆಟ್ಟಿ ಹಾಗೂ ಬಿಜು (ಸಂತೋಷ್) ಇವರು ವಿಶ್ವಾಸದ ಮನೆ ಅನಾಥಾಶ್ರಮದಲ್ಲಿ ಆರೈಕೆ ಹಾಗೂ ವೈದ್ಯಕೀಯ ಶುಶ್ರೂಷೆ ಹೊಂದಿ ಗುಣಮುಖರಾಗಿ ತಮ್ಮ ಕುಟುಂಬಕ್ಕೆ ತೆರಳಿದ್ದಾರೆ.**
- **ವಿಶ್ವಾಸದ ಮನೆ ಅನಾಥಾಶ್ರಮ ಹಾಗೂ ಪುನರ್ವಸತಿ ಕೇಂದ್ರದ ನೂತನ ಅಡುಗೆ ಮನೆ ಕಟ್ಟಡವನ್ನು ಸಚಿವ ಕೋಟ ಶ್ರೀನಿವಾಸ ಪೂಜಾರಿಯವರು ಉದ್ಘಾಟನೆ ಮಾಡಿದರು. ಇದರಲ್ಲಿ ಕಾಪು ವಿಧಾನ ಸಭಾ ಕ್ಷೇತ್ರ ಶಾಸಕರಾದ ಲಾಲಾಜಿ ಆರ್. ಮೆಂಡನ್, ಉಡುಪಿ ಜಿಲ್ಲಾ ಪಂ. ಅಧ್ಯಕ್ಷರಾದ ಶ್ರೀ ಶಂಕರ ಪೂಜಾರಿ, ಉದ್ಯಮಿಯಾದ ಶ್ರೀ ಪ್ರಮೋದ್ ಮಧ್ವರಾಜ್, ಸಮಾಜಸೇವಕರಾದ ಶ್ರೀ ಲೀಲಾಧರ್ ಶೆಟ್ಟಿ ಕರಂದಾಡಿ, ಇನ್ನಂಜೆ ಗ್ರಾ. ಪಂ. ಅಧ್ಯಕ್ಷರಾದ ವಸಂತಿ ಆಚಾರ್ಯರವರು ಉಪಸ್ಥಿತರಿದ್ದರು.**

ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ
(ಫಿಲಿಪ್ಪಿ 2:5).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

## ತಿಳುವಳಿಕೆಯ ಸ್ವರ

# ಹಳೆಯ ಒಡಂಬಡಿಕೆಯ ಪುಸ್ತಕಗಳ ಸಂಗ್ರಹ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಸತ್ಯವೇದಕ್ಕೆ ಸಂಬಂಧಿಸಿದ ಕೆಲವು ಸತ್ಯವೇದದ ವಚನಗಳು ಮತ್ತು ಅನಿಸಿಕೆಗಳು:

1. ದೇವರ ವಾಕ್ಯವು ಸಜೀವವಾದದ್ದು, ಕಾರ್ಯ ಸಾಧಕವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು, ಪ್ರಾಣ ಆತ್ಮಗಳನ್ನೂ ಕೀಲು ಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದ್ದು, ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ (ಇಬ್ರಿ. 4:12).
2. ನನ್ನ ವಾಕ್ಯವು ಬೆಂಕಿಗೂ ಬಂಡೆಯನ್ನು ಒಡೆದು ಬಿಡುವ ಚಮಟಿಗೆಗೂ ಸಮಾನವಾಗಿದೆಯಲ್ಲಾ (ಯೆರೆ. 23:29).
3. ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ (ಕೀರ್ತ. 119:105).
4. ನನ್ನ ಕಣ್ಣು ತೆರೆ; ಆಗ ನಿನ್ನ ಧರ್ಮಶಾಸ್ತ್ರದ ಅದ್ಭುತಗಳನ್ನು ಕಂಡುಕೊಳ್ಳುವೆನು (ಕೀರ್ತ. 119:18).
5. ನಿನ್ನ ವಾಕ್ಯ ವಿವರಣೆಯಿಂದ ಯುಕ್ತಿಹೀನರಿಗೆ ಜ್ಞಾನೋದಯವಾಗುವುದು (ಕೀರ್ತ. 119:130).
6. ಯೆಹೋವನ ಧರ್ಮಶಾಸ್ತ್ರವು ಲೋಪವಿಲ್ಲದ್ದು; ಅದು ಪ್ರಾಣವನ್ನು ಉಜ್ಜೀವಿಸಮಾಡುವಂಥದ್ದು (ಕೀರ್ತ. 19:7).
7. ಧರ್ಮಶಾಸ್ತ್ರವು ಪರಿಶುದ್ಧವಾದದ್ದು (ರೋಮಾ. 7:12).
8. ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿ (ಎಫೆ. 6:17).
9. ದೇವರ ಸದಾ ಜೀವವುಳ್ಳ ವಾಕ್ಯ (1 ಪೇತ್ರ. 1:23).
10. ಹಸು ಮಕ್ಕಳಂತೆ ಪಾರಮಾರ್ಥಿಕವಾದ (ದೇವರ ವಾಕ್ಯವೆಂಬ) ಶುದ್ಧ ಹಾಲನ್ನು ಬಯಸಿರಿ (1 ಪೇತ್ರ. 2:2).
11. ದೇವರ ವಾಕ್ಯವನ್ನು ಸ್ಮರಿಸುವವನು ಸುಕ್ಷೇಮವನ್ನು ಪಡೆಯುವನು (ಜ್ಞಾನೋ. 16:20).
12. ನಿನ್ನ ನುಡಿಯು ನನ್ನನ್ನು ಚೈತನ್ಯಗೊಳಿಸುತ್ತದೆ; ಆಪತ್ಕಾಲದಲ್ಲಿ ಇದೇ ನನಗೆ ಆದರಣೆ (ಕೀರ್ತ. 119:50).
13. ಆ ಗ್ರಂಥಗಳು ಕ್ರಿಸ್ತ ಯೇಸುವಿನಲ್ಲಿರುವ ನಂಬಿಕೆಯ ಮೂಲಕ ರಕ್ಷಣೆ ಹೊಂದಿಸುವ ಜ್ಞಾನವನ್ನು ಕೊಡುವುದಕ್ಕೆ ಶಕ್ತವಾಗಿವೆ. ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ.

**ಇತರ ಅನಿಸಿಕೆಗಳು :–** ಮಾನವನ ಜ್ಞಾನಕ್ಕೆ ತಿಳುವಳಿಕೆಯೂ ಅನುಭವವೂ ಎರಡು ಮೂಲಭೂತ ಮಾರ್ಗಗಳಾಗಿವೆ. ಈ ಜಗತ್ತಿನಲ್ಲಿ ವಾಸಮಾಡುವ ನಮಗೆ ಈ ಮಾರ್ಗಗಳು ಅತ್ಯಗತ್ಯವಾಗಿವೆ. ನಾನು ಯಾರು? ನಾನು ಎಲ್ಲಿಂದ ಬಂದೆ? ನಾನು ಎಲ್ಲಿಗೆ ಹೋಗುವೆನು? ನನ್ನ ಜೀವಿತದ ಉದ್ದೇಶವೇನು? ಎಂಬ ಈ ಪ್ರಶ್ನೆಗಳಿಗೆ ತಿಳುವಳಿಕೆಯೂ ಅನುಭವವೂ ತಕ್ಕುದಾದ ಉತ್ತರವನ್ನು ಕೊಡಲಾರವು. ಈ ಮುಖ್ಯ ಪ್ರಶ್ನೆಗಳಿಗೆ ಸತ್ಯವೇದವು ಮೂರನೇ ಮಾರ್ಗದ ಜ್ಞಾನವಾಗಿ ಸಮಂಜಸವಾದ ಉತ್ತರವನ್ನು ಕೊಡಲು ಮಾತ್ರ ಸಾಧ್ಯವಾಗಿದೆ.

ದೇವರು ಮನುಷ್ಯನೊಂದಿಗೆ ಕನಸಿನ ಮುಖಾಂತರ, ದರ್ಶನಗಳ ಮುಖಾಂತರ, ದೇವದೂತರ ಮುಖಾಂತರ ವಿವಿಧ ರೀತಿಯಲ್ಲಿ ಮಾತಾಡಿರುವುದು ಮಾತ್ರವಲ್ಲದೇ ತನ್ನ ಸ್ಪಷ್ಟವಾದ ಕೆಲಸಗಳನ್ನು ಮಾನವನಾದ ಯೇಸುಕ್ರಿಸ್ತನ ಮತ್ತು ಪರಿಶುದ್ಧ ಗ್ರಂಥಗಳ ಮುಖಾಂತರ ಪ್ರಕಟಿಸಿದನು (ಇಬ್ರಿ. 1:1–2). ದೇವರ ಈ ಮಾರ್ಗವು ಮಾನವನ ವ್ಯವಹಾರಕ್ಕೆ ಹಾಸು ಹೊಕ್ಕಾಗಿದ್ದು ಮನುಷ್ಯವತಾರಿಯಾದ ಮಗನ ಚರಿತ್ರೆ ಮತ್ತು ಮಾನವನ ವಿಮೋಚನೆಗಾಗಿ ದೇವರು ಮಾಡಿರುವ ಯೋಜನೆ ಕಟ್ಟಕಡೆಗೆ ಕ್ರಿಸ್ತನಲ್ಲಿ ಎಲ್ಲವೂ ಹೊಸದಾಗುವುದನ್ನು ಪರಿಶುದ್ಧ ಗ್ರಂಥದಲ್ಲಿ ವಿವರಿಸಲಾಗಿದೆ.

ಯೇಸುಕ್ರಿಸ್ತನು ಸೃಷ್ಟಿಕರ್ತನು ಮತ್ತು ವಿಮೋಚಕನು ಆಗಿದ್ದು ಶಿಲುಬೆಯಲ್ಲಿ ಮಾನವನ ಚರಿತ್ರೆಯ ಬಿಂದುವಾಗಿ ಪ್ರಕಟಗೊಂಡನು. ಮೆಸ್ಸಿಯನ ಮತ್ತು ಆತನ ಕೆಲಸಗಳಲ್ಲಿ ವಿವಿಧ ಮಾರ್ಗಗಳನ್ನು ಹಳೇ ಒಡಂಬಡಿಕೆಯಲ್ಲಿ ತಿಳಿಸಲಾಗಿದೆ. ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿ ಯೇಸುಕ್ರಿಸ್ತನು ಹೊಸ ಒಡಂಬಡಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವನು (ಇಬ್ರಿ. 12:2). ಆತನು ಆದಿಯೂ ಅಂತ್ಯವೂ ಮೊದಲನೆಯವನೂ ಕಡೆಯವನೂ ಪ್ರಾರಂಭವೂ ಸಮಾಪ್ತಿಯೂ ಆಗಿರುವನು (ಪ್ರಕ. 22:13).

ಕರ್ತನಾದ ಯೇಸುಕ್ರಿಸ್ತನ ಮತ್ತು ಆತನು ಮಾನವರಿಗಾಗಿ ಮಾಡಿದ ವಿಮೋಚನಾ ಕಾರ್ಯದ ವಿವರಣೆಯೇ ಸತ್ಯವೇದದ ಮುಖ್ಯ ಗುರಿಯಾಗಿದೆ. ಮಾನವನಾದ ಯೇಸುಕ್ರಿಸ್ತನ ಮತ್ತು

ನಿಮ್ಮ ಸೈರಣೆಯು ಎಲ್ಲಾ ಮನುಷ್ಯರಿಗೆ ಗೊತ್ತಾಗಲಿ, ಕರ್ತನು ಹತ್ತಿರವಾಗಿದ್ದಾನೆ (ಫಿಲಿ. 4:5).

ಆತನ ಕೆಲಸಗಳ ವಿಷಯ ಹಳೇ ಒಡಂಬಡಿಕೆಯಲ್ಲಿ ವಾಗ್ದಾನ ಮಾಡಲ್ಪಟ್ಟಿದೆ ಮತ್ತು ಪ್ರವಾದಿಸಲ್ಪಟ್ಟಿವೆ. ಸುವಾರ್ತೆಗಳಲ್ಲಿಯೂ ಪ್ರತಿಕೆಗಳಲ್ಲಿಯೂ ಯೇಸುಕ್ರಿಸ್ತನ ಸರ್ವಸತ್ಯತೆ ಮತ್ತು ಸೌಂದರ್ಯತೆಗಳಲ್ಲಿ ಆತನ ಜೀವನ, ಮರಣ ಮತ್ತು ಪುನರುತ್ಥಾನಗಳು ಪ್ರಕಟವಾಗಿವೆ. ಪ್ರಕಟಣೆ ಪುಸ್ತಕದಲ್ಲಿ ಯೇಸುಕ್ರಿಸ್ತನ ಗಂಭೀರವಾದ ಎರಡನೇ ಬರೋಣದ ವಿಷಯವಾಗಿ ಮುಂತಿಳಿಸಲ್ಪಟ್ಟಿದೆ. ಜೀವಿಸುವ ದೇವರ ವಾಕ್ಯವಾಗಿರುವ, ಕರ್ತನಾದ ಯೇಸುಕ್ರಿಸ್ತನ ವಿಷಯವಾಗಿ ಪ್ರಕಟಿಸುವುದೇ ಬರೆಯಲ್ಪಟ್ಟ ದೇವರ ವಾಕ್ಯವಾಗಿರುವ ಸತ್ಯವೇದದ ಮುಖ್ಯ ಉದ್ದೇಶವಾಗಿದೆ. ಬರೆಯಲ್ಪಟ್ಟ ಸಕಲ ಪುಸಕ್ತಗಳಲ್ಲಿ ಸತ್ಯವೇದವು ಅತ್ಯುತ್ತಮವಾದ ಪುಸ್ತಕವಾಗಿದೆ. ಈ ಪುಸ್ತಕವನ್ನು ಮನುಷ್ಯರು ಬರೆದಾಗ್ಯೂ ಇದರ ಮೂಲ ಕರ್ತೃವು ಮಹೋನ್ನತನಾದ ದೇವರು ತಾನೇ. ಸತ್ಯವೇದವು ಇದರ ವಿಷಯದಲ್ಲಿ ಬಹು ಸ್ಪಷ್ಟವಾಗಿದೆ. **"ಕರ್ತನ ಮಾತೋ ಸದಾಕಾಲವೂ ಇರುವುದು"** (1 ಪೇತ್ರ. 1:25). **"ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ."** (2 ತಿಮೊ. 3:16). ದೇವರು ಪವಿತ್ರಾತ್ಮನಿಂದ ಭಕ್ತರ ಮುಖಾಂತರ ಇತರ ಮಾತಾಡಿದನು. ಅಷ್ಟು ಮಾತ್ರವಲ್ಲದೇ ಸತ್ಯವೇದವು ದೇವರ ಮಾತುಗಳನ್ನು ಕೃತ್ಯಗಳನ್ನು ಹೊಂದಿಕೊಂಡಿದ್ದು ಇದು ವಿವಾದಾಸ್ಪದವಿಲ್ಲದೆ ದೇವರ ವಾಕ್ಯವೆಂಬುದಕ್ಕೆ ಸಾಕ್ಷಿಯಾಗಿರುವುದು.

ಮುಂದುವರಿಯುವುದು....

**ಸಹೋ। ಎಲಿಜಬೆತ್ ಡಿ'ಸೋಜಾ**

# ಸ್ಥಳೀಯ ಮತ್ತು ವಿದೇಶ ಸುದ್ದಿ

- ಗಡ್ಕರಿಯೂ ಭೂಗಳ್ಳ ಮಹಾರಾಷ್ಟ್ರದ ನಾಗಪುರ ಜಿಲ್ಲೆಯ ಉಮ್ರೇಡ್ ತಾಲ್ಲೂಕಿನಲ್ಲಿ ಅಣೆಕಟ್ಟೆ ನಿರ್ಮಾಣಕ್ಕೆ ರೈತರಿಂದ ವಶಪಡಿಸಿಕೊಳ್ಳಲಾದ ಕೃಷಿ ಭೂಮಿಯಲ್ಲಿ ನೂರು ಎಕರೆಭೂಮಿಯನ್ನು ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿ ಮಹಾರಾಷ್ಟ್ರದ ಕಾಂಗ್ರೆಸ್ ಎನ್‌ಸಿಪಿ ಸರ್ಕಾರದ ನೆರವಿನಿಂದ ಕಬಳಿಸಿದ್ದಾರೆ. ಎಂದು ಭ್ರಷ್ಟಾಚಾರ ವಿರೋಧಿ ಅಂದೋಲನದ ಮುಖಂಡ ಅರವಿಂದ ಕೇಜ್ರಿವಾಲ್ ಆರೋಪ ಮಾಡಿದರು.
- ಭಾರತ–ಆಸ್ಟ್ರೇಲಿಯಾ ವಹಿವಾಟು ದ್ವಿಗುಣ : ಭಾರತದೊಂದಿಗಿನ ವ್ಯಾಪಾರ ಸಂಬಂಧಗಳನ್ನು ಬಲಪಡಿಸಲು ಆಸ್ಟ್ರೇಲಿಯಾ ಉತ್ಸುಕವಾಗಿದ್ದು, 2015ರ ವೇಳೆಗೆ ಉಭಯ ರಾಷ್ಟ್ರಗಳ ವಹಿವಾಟಿನ ಮೊತ್ತ 40 ಶತಕೋಟಿ ಡಾಲರ್ ಗುರಿ ತಲುಪಲಿದೆ ಎಂದು ಆಸ್ಟ್ರೇಲಿಯಾದ ಪ್ರಧಾನಿ ಜೂಲಿಯಾ ಗಿಲ್ಲಾರ್ಡ್ ವಿಶ್ವಾಸ ವ್ಯಕ್ತಪಡಿಸಿದರು.
- ಬ್ರಿಟಿಷ್ ಲೇಖಕಿಗೆ 'ಬುಕರ್' ಅಂತರಾಷ್ಟ್ರೀಯ ಸಾಹಿತ್ಯ ಕ್ಷೇತ್ರದ ಪ್ರತಿಷ್ಠಿತ ಬುಕರ್ ಪ್ರಶಸ್ತಿ ಈ ಬಾರಿ ಖ್ಯಾತ ಬ್ರಿಟಿಷ್ ಕಾದಂಬರಿಗಾರ್ತಿ ಹಿಲರಿ ಮ್ಯಾಂಟಲ್ ಅವರ ಪಾಲಾಗಿದೆ. 'ಬ್ರಿಂಗ್ ಆಪ್ ದಿ ಬಾಡೀಸ್" ಎಂಬ ಕಾದಂಬರಿ ಅವರಿಗೆ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ತಂದು ಕೊಟ್ಟಿದೆ.
- ಎರಡನೇ ಬಾರಿ ಅಮೆರಿಕ ಅಧ್ಯಕ್ಷರಾಗಲು ಬಯಸಿರುವ ಬರಾಕ್ ಒಬಾಮ ಎರಡನೇ ಸುತ್ತಿನ ಸಾರ್ವಜನಿಕ ಚುನಾವಣಾ ಚರ್ಚೆಯಲ್ಲಿ ಮೇಲುಗೈ ಸಾಧಿಸಿದ್ದಾರೆ.
- ಭ್ರಷ್ಟಾಚಾರ ಮಾನವ ಹಕ್ಕಿನ ಉಲ್ಲಂಘನೆ :– ಭ್ರಷ್ಟಾಚಾರವು ಕೇವಲ ಒಂದು ಅಪರಾಧ ಮಾತ್ರವಲ್ಲ. ಅದು ಇತರರ ಮಾನವ ಹಕ್ಕುಗಳನ್ನು ನಿರಾಕರಿಸುವ ಮೂಲಕ ವ್ಯವಸ್ಥಿತ ಆರ್ಥಿಕ ಅಪರಾಧಗಳಿಗೂ ದಾರಿ ಮಾಡುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.
- ಮೆಲ್ಬೋರ್ನ್, ದೇಶಗಳ ಮಹಿಳಾ ಆರ್ಥಿಕ ಸಬಲೀಕರಣದ ಜಾಗತಿಕ ಸಮೀಕ್ಷೆಯಲ್ಲಿ ಭಾರತ ಅತ್ಯಂತ ಕಳಪೆಯ 115 ನೇ ಸ್ಥಾನ ಪಡೆದಿದ್ದು, ಈ ಪಟ್ಟಿಯಲ್ಲಿ ಆಸ್ಟ್ರೇಲಿಯಾ ಪ್ರಥಮ ಸ್ಥಾನದಲ್ಲಿದ್ದು, ನಂತರದ ಸ್ಥಾನವನ್ನು ನಾರ್ವೆ, ಸ್ವೀಡನ್ ಮತ್ತು ಫಿನ್‌ಲ್ಯಾಂಡ್ ಹೊಂದಿದೆ.
- ಅಸ್ಸಾಂ ಪ್ರವಾಹ ಸಂತ್ರಸ್ತರ ಆಶಾಕಿರಣ ಬೋಟ್ ಕ್ಲಿನಿಕ್: ಈ ವರ್ಷ ಸತತವಾಗಿ ಅಸ್ಸಾಂನಲ್ಲುಂಟಾದ ಪ್ರವಾಹದಿಂದ ಲಕ್ಷಾಂತರ ಮಕ್ಕಳು ಅನಾರೋಗ್ಯಕ್ಕೆ ತುತ್ತಾಗುವುದರ ಜತೆಗೆ ಅಪೌಷ್ಟಿಕತೆಯಿಂದಲೂ ಬಳಲುತ್ತಿದ್ದು, ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆ. ಇವರಿಗೆಲ್ಲಾ ಈಗ ಏಕೈಕ ಆಶಾಕಿರಣ ವಾಗಿರುವುದು ರಾಷ್ಟ್ರೀಯ ಆರೋಗ್ಯ ಮಿಷನ್ ಸಹಯೋಗದ ಬೋಟ್ ಕ್ಲಿನಿಕ್‌ನ ಆರೋಗ್ಯ ಸೇವೆ.

ನೀವು ಯೆಹೋವನನ್ನು ಹೊಂದಿಕೊಂಡಿರುವ ತನಕ ಆತನೂ ನಿಮ್ಮೊಂದಿಗಿರುವನು
(2 ಪೂರ್ವ. 15:2).

# ರೂತಳು

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

3) ನಿನ್ನ ದೇವರಾದ ಯೆಹೋವನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತಬಾರದು. ಯೆಹೋವನು ತನ್ನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತುವವನನ್ನು ಶಿಕ್ಷಿಸದೆ ಬಿಡುವುದಿಲ್ಲ (ವಿಮೋ. 20:7).

4) ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವುದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆರು ದಿವಸಗಳಲ್ಲಿ ನೀನು ದುಡಿದು ನಿನ್ನ ಕೆಲಸವನ್ನೆಲ್ಲಾ ಮಾಡಬೇಕು. ಏಳನೆಯ ದಿನವು ವಿಶ್ರಾಂತಿ ದಿನವಾಗಿದೆ. ಅದರಲ್ಲಿ ನೀನು ಯಾವ ಕೆಲಸವನ್ನು ಮಾಡಬಾರದು. ನಿನ್ನ ಗಂಡು ಮಕ್ಕಳು, ಹೆಣ್ಣು ಮಕ್ಕಳು, ಗಂಡಾಳು, ಹೆಣ್ಣಾಳು, ಪಶುಗಳು ನಿನ್ನ ಊರಲ್ಲಿ ಇರುವ ಅನ್ಯ ದೇಶದವರು ಯಾವ ಕೆಲಸವನ್ನು ಮಾಡಬಾರದು. ಆರು ದಿನಗಳಲ್ಲಿ ಯೆಹೋವನು ಭೂಮ್ಯಾಕಾಶಗಳನ್ನು ಸಮುದ್ರವನ್ನು ಅವುಗಳಲ್ಲಿರುವ ಸಮಸ್ತವನ್ನು ನಿರ್ಮಾಣಮಾಡಿ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು. ಅದುದರಿಂದ ಯೆಹೋವನು ಸಬ್ಬತ್ ದಿನವನ್ನು ತನ್ನ ದಿನವಾಗಿರಲಿ ಎಂದು ಆಶೀರ್ವದಿಸಿದನು (ವಿಮೋ. 20:8–11).

**ಮಹಿಳೆಯರ ಸ್ವರ**

5) ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು. ಸನ್ಮಾನಿಸಿದರೆ ನಿನ್ನ ದೇವರಾದ ಯೆಹೋವನು ನಿನಗೆ ಅನುಗ್ರಹಿಸುವ ದೇಶದಲ್ಲಿ ನೀನು ಬಹುಕಾಲ ಇರುವಿ (ವಿಮೋ. 20:12).

6) ನರಹತ್ಯೆ ಮಾಡಬಾರದು (ವಿಮೋ. 20:13).

7) ವ್ಯಭಿಚಾರ ಮಾಡಬಾರದು (ವಿಮೋ. 20:14).

8) ಕದಿಯಬಾರದು (ವಿಮೋ. 20:15).

9) ಮತ್ತೊಬ್ಬನ ಮೇಲೆ ಸುಳ್ಳು ಸಾಕ್ಷಿ ಹೇಳಬಾರದು (ವಿಮೋ. 20:16).

10) ಮತ್ತೊಬ್ಬನ ಮನೆಯನ್ನು ಆಶಿಸಬಾರದು, ಮತ್ತೊಬ್ಬನ ಹೆಂಡತಿ, ಗಂಡಾಳು, ಹೆಣ್ಣಾಳು ಎತ್ತು ಕತ್ತೆ ಮುಂತಾದ ಯಾವುದನ್ನೂ ಆಶಿಸಬಾರದು (ವಿಮೋ. 20:17).

ಸತ್ಯವೇದದಲ್ಲಿರುವ 10 ಆಜ್ಞೆಗಳಲ್ಲಿ ನಾನು ರೋಮನ್ ಕ್ಯಾಥೋಲಿಕ್ ಕುಟುಂಬದಲ್ಲಿ ಇದ್ದಾಗ ಕಲಿತದ್ದು ಎರಡನೆ ಆಜ್ಞೆಯನ್ನು ಕಲಿಸದೆ ಹಾಗೆಯೇ ಬಿಟ್ಟು ಬಿಟ್ಟಿದ್ದಾರೆ. ಹಾಗೆಯೇ 10ನೇ ಆಜ್ಞೆಯನ್ನು ಎರಡು ಮಾಡಿ ನಮಗೆ ಕಲಿಸಿದ್ದಾರೆ. ಸತ್ಯವೇದ ಹೇಳುತ್ತದೆ, ಹೋಶೆ. 4:6 ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ. ಯೆಶಾ. 5:13 ನನ್ನ ಜನರು ಜ್ಞಾನಹೀನರಾಗಿ ಸೆರೆಗೆ ಹೋಗುವುದು ಖಂಡಿತ. ಮತ್ತಾ. 22:29 ಅದಕ್ಕೆ ಯೇಸು ಉತ್ತರವಾಗಿ ಅವರಿಗೆ ನೀವು ಶಾಸ್ತ್ರವನ್ನಾದರೂ ದೇವರ ಶಕ್ತಿಯನ್ನಾದರೂ ತಿಳಿಯದೇ ತಪ್ಪುವವರಾಗಿದ್ದೀರಿ.

ಮಲಾ. 2:7 ಜ್ಞಾನನುಸಾರವಾಗಿ ಮಾತಾಡುವುದು ಯಾಜಕನ ತುಟಿಗಳ ಧರ್ಮವಷ್ಟೇ. ಅವನು ಸೇನಾಧಿಶ್ವರ ಯೆಹೋವನ ದೂತನಾಗಿರುವ ಕಾರಣ ಜನರು ಅವನ ಬಾಯಿಂದ ಧರ್ಮೋಪದೇಶವನ್ನು ಕೇಳಿಕೊಳ್ಳತಕ್ಕದ್ದು. ನೀವೋ ದಾರಿ ತಪ್ಪಿದ್ದೀರಿ. ನಿಮ್ಮ ಧರ್ಮೋಪದೇಶದಿಂದ ಬಹು ಜನರನ್ನು ಮುಗ್ಗರಿಸುವ ಹಾಗೆ ಮಾಡಿದ್ದೀರಿ. ಲೇವಿಯ ಒಡಂಬಡಿಕೆಯನ್ನು ಭಂಗಪಡಿಸಿದ್ದೀರಿ. ಇದು ಸೇನಾಧಿಶ್ವರ ಯೆಹೋವನ ನುಡಿ. ನೀವು ನನ್ನ ಮಾರ್ಗಗಳನ್ನು ಅನುಸರಿಸದೆ ನಿಮ್ಮ ಧರ್ಮೋಪದೇಶದಲ್ಲಿ ಮುಖದಾಕ್ಷಿಣ್ಯವನ್ನು ತೋರಿಸಿದ್ದರಿಂದ ನಾನಂತು ನಿಮ್ಮನ್ನು ಎಲ್ಲಾ ಜನರ ಮುಂದೆ ಮಾನಗೆಟ್ಟವರನ್ನಾಗಿಯೂ ಕೀಳದವರನ್ನಾಗಿಯೂ ಮಾಡುವೆನು. ಧರ್ಮೋ. 4:2, 12:32, ಜ್ಞಾನೋ. 30:6, ಪ್ರಕ. 22:18–19 ಸತ್ಯವೇದ ಹೇಳುತ್ತದೆ, ಸತ್ಯವೇದದಿಂದ ಒಂದೇ ಒಂದು ವಾಕ್ಯವನ್ನು ತೆಗೆಯಬಾರದು ಹಾಗೂ ಕೂಡಿಸಬಾರದು. ಆದರೆ ಕ್ರೈಸ್ತರು ಎಂದು ಹೇಳಿ ಕಲಿಸುವವರು ಸತ್ಯವೇದದಲ್ಲಿರುವ ಸತ್ಯಗಳನ್ನು ಇರುವ ಹಾಗೆ ಕಲಿಸಿದ್ದಾರೆಯೋ? ಹಾಗದರೆ ಸುಳ್ಳು ಬೋಧಕರು, ಸುಳ್ಳು ಶಿಕ್ಷಕರು, ಸುಳ್ಳು ಪ್ರವಾದಿಗಳು ಯಾರು? ನಿಜವಾಗಿ ಸತ್ಯವೇದದ ಸುವಾರ್ತೆ ಸಾರುವವರಿಗೆ ಅವರು ಸುಳ್ಳು ಬೋಧಕರು ಅಂಥ ಬಿಂಬಿಸುತ್ತಾರೆ. ಹಾಗಾದರೆ ಮನೆಗೆ ಸುವಾರ್ತೆ ತೆಗೆದುಕೊಂಡು ಬರುವವರಿಗೆ ಮನೆಗೆ ಬರಮಾಡಬೇಡಿ ಅವರು ಬ್ರೈನ್‌ವಾಶ್ ಮಾಡುತ್ತಾರೆ ಎಂದು ಹೇಳುತ್ತಾರೆ, ಎಚ್ಚರಿಸುತ್ತಾರೆ ಹಾಗಾದರೆ ನೀವು ಏನು ಮಾಡುತ್ತಾ ಇದ್ದಿರಾ ಲೋಕದ ಕಟ್ಟಕಡೆಗೆ ಹೋಗಿ ಸುವಾರ್ತೆ ಸಾರು ಎಂದು ಯೇಸು ಹೇಳಿದ್ದಾರಲ್ಲಾ ನಿಮ್ಮ ಕರ್ತವ್ಯವನ್ನು ಮಾಡುತ್ತಾ ಇದ್ದಿರಾ?

ಮತ್ತಾ. 28:18–20 ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ.

ತಾಯಿ ಮಗನನ್ನು ಸಂತೈಸುವ ಪ್ರಕಾರ ನಾನು ನಿಮ್ಮನ್ನು ಸಂತೈಸುವೆನು (ಯೆಶಾ. 66:13).

ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ ಅವರಿಗೆ ತಂದೆಯ ಮಗನ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶಮಾಡಿರಿ. ನೋಡಿರಿ ನಾನು ಯುಗದ ಸಮಾಪ್ತಿಯ ವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು.

7) ನ್ಯಾಯ. 3:7 ದೇವರನ್ನು ಮರೆತರು. ಕೀರ್ತ. 103:1–2 ನನ್ನ ಮನವೇ ಯೆಹೋವನನ್ನು ಕೊಂಡಾಡು ನನ್ನ ಸರ್ವೆಂದ್ರಿಯಗಳೇ ಆತನ ಪವಿತ್ರ ನಾಮವನ್ನು ಕೀರ್ತಿಸಿರಿ ನನ್ನ ಮನವೇ ಯೆಹೋವನನ್ನು ಕೊಂಡಾಡು ಆತನು ಮಾಡಿದ ಉಪಕಾರಗಳಲ್ಲಿ ಒಂದನ್ನೂ ಮರೆಯದಿರು. ಮನುಷ್ಯನಲ್ಲಿರುವ ಅತೀ ದೊಡ್ಡ ಕೆಟ್ಟ ಗುಣ ಅಂದರೆ ಉಪಕಾರವನ್ನು ಮರೆಯುವಂತದ್ದು. ಮನುಷ್ಯನು ಎಷ್ಟೇ ದೊಡ್ಡ ಅವಸ್ಥೆಗೆ ಹೋದರೂ ತನ್ನ ಸೃಷ್ಟಿ ಕರ್ತನನ್ನು ಮಾತ್ರ ಮರೆಯಬಾರದು.

ಮುಂದುವರಿಯುವದು........

ಕರ್ತನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ.

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

---

## ಪ್ರಾರ್ಥನಾ ಮನವಿಗಳು

- **ದೇವರ ಸ್ವರ ಮಾಸ ಪತ್ರಿಕೆಯ ಸೇವೆಯನ್ನು ಕರ್ತನು ವಿಸ್ತರಿಸುವಂತೆ ಸೇವೆಗೆ ಬೇಕಾದ ಎಲ್ಲಾ ಅವಶ್ಯಕತೆಗಳು ಸಂಧಿಸುವಂತೆ ಪ್ರಾರ್ಥಿಸಿರಿ.**
- **ನಮ್ಮ ರಾಜ್ಯದಲ್ಲಿ ನಡೆಯುತ್ತಿರುವ ಎಲ್ಲಾ ರಾಜಕೀಯ ಗೊಂದಲಗಳು ನೀಗುವಂತೆ ಸಮಾಧಾನ ನೆಲೆಸುವಂತೆ ಪ್ರಾರ್ಥಿಸೋಣ.**
- **ನಮ್ಮ ರಾಜ್ಯದಲ್ಲಿ ಮತ್ತು ದೇಶದಲ್ಲಿ ಉತ್ತಮ ಆಡಳಿತ ಬರುವಂತೆ ಪ್ರಾರ್ಥಿಸಿರಿ.**
- **ಸೇವೆ ಮಾಡುವ ಪ್ರತಿಯೊಂದು ಸೇವಕರುಗಳಿಗೆ, ಸಭೆಗಳಿಗೆ, ವಿಶ್ವಾಸಿಗಳಿಗೆ ಕರ್ತನು ಸಂರಕ್ಷಣೆ ಕೊಟ್ಟು ರಕ್ಷಣೆಯಲ್ಲಿ ದೃಢವಾಗಿ ನಿಲ್ಲಲು ಸಹಾಯ ಮಾಡುವಂತೆ ಪ್ರಾರ್ಥಿಸಿರಿ.**

---

## ವಿಶೇಷ ಪ್ರಾರ್ಥನೆ :

ಪ್ರತಿ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೆವ್ವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654, 9740985802**

ರಕ್ಷಣಾಪಾತ್ರೆಯನ್ನು ತೆಗೆದುಕೊಂಡು ಯೆಹೋವನಾಮವನ್ನು ಪ್ರಖ್ಯಾತಿಪಡಿಸುವೆನು
(ಕೀರ್ತ. 116:13).

## ಮಕ್ಕಳ ಸ್ವರ

1) ಯಾಕೋಬನ ಇಬ್ಬರು ಹೆಂಡತಿಯರ ಹೆಸರೇನು?
2) ಯೋಸೇಫನ ಇಬ್ಬರು ಕುಮಾರರ ಹೆಸರೇನು?
3) ಯೋಸೇಫನಿಗೆ ಫರೋಹನು ಇಟ್ಟಂತ ಹೆಸರು ಯಾವುದು ಅಥವಾ ಏನು ?
4) ಯೋಸೇಫನು ಮದುವೆಯಾದ ಸ್ತ್ರೀ ಯಾರ ಮಗಳು? ಆಕೆಯ ಹೆಸರೇನು?
5) ಬೋವಜನು ಯಾವ ಗೋತ್ರ ಅಥವಾ ಕುಲದವನು?
6) "ನೊವೊಮಿ" ಹೆಸರಿನ ಅರ್ಥವೇನು?
7) ನೊವೊಮಿಯ ಗಂಡ ಬೇತ್ಲೆಹೇಮಿನ ಯಾವ ಪ್ರಾಂತಕ್ಕೆ ಸೇರಿದವನು?
8) ನೊವೊಮಿಯ ಗಂಡನ ಹೆಸರೇನು?
9) ನೊವೊಮಿಯ ಇಬ್ಬರು ಕುಮಾರರ ಹೆಸರೇನು?
10) ನೊವೊಮಿಯ ಒಬ್ಬಳ ಸೊಸೆ, ರೂತಳು; ಮತ್ತೊಬ್ಬ ಸೊಸೆಯ ಹೆಸರೇನು?

---

### ಅಕ್ಟೋಬರ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಸರಿ ಉತ್ತರಗಳು:

1. ಅಬ್ಷಾಲೋಮನು (2 ಸಮು. 15:1–13).
2. ಅಮ್ರಾಮನು (ತಂದೆ) ಯೋಕೆಬೆದಳು (ತಾಯಿ) ಅರಣ್ಯ. 26:59, ವಿಮೋ. 6:20).
3. ಚಿಪ್ಪೋರಳು (ವಿಮೋ. 2:21).
4. ಹೇಬೆಲನು (ಆದಿ. 4:8).
5. ಯಾಕೋಬನು (ಅ.ಕೃ. 12:1).
6. ನೆಬೋ (ಧರ್ಮೋ. 34:1)
7. 127 ವರ್ಷ ಹೆಬ್ರೋನೆಂಬ ಕಿರ್ಯತರ್ಬ (ಆದಿ. 23:1).
8. ಕೆಟೂರಳು (ಆದಿ. 25:1).
9. 175 ವರ್ಷ (ಆದಿ. 25:7).
10. 60 ವರ್ಷ (ಆದಿ. 25:26).

---

## ಜೋಕ್ಸ್

ಕತೆಗಾರ : "ನನ್ನಲ್ಲೊಂದು ಅದ್ಭುತ ಕತೆಯಿದೆ. ಅದನ್ನು ಕೇಳಿದರೆ ರೋಮಾಂಚನದಿಂದ ಕೇಳಿದವರ ತಲೆ ಕೂದಲು ನೆಟ್ಟಗಾಗುವುದು ಖಂಡಿತ.

ನಿರ್ದೇಶಕ : "ಹೌದೇ, ಹಾಗಿದ್ದರೆ ಯಾರಾದರೂ ಬೋಳು ತಲೆಯವರ ಎದುರು ನಿಮ್ಮಕತೆ ಓದಿ ಹೇಳಿ"

ದೇವರ ವಾಕ್ಯವನ್ನು ಸ್ಮರಿಸುವವನು ಸುಕ್ಷೇಮವನ್ನು ಪಡೆಯುವನು
(ಜ್ಞಾನೋ. 16:20).